ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 11, 2024

ಸಂಪುಟ : 51  ಸಂಚಿಕೆ : 28  ☎ 08192-254736  91642 99999  RNI No: 27369  ಪುಟ : 6  ರೂ : 5.00  www.janathavani.com  janathavani@mac.com




## ರೈತರ ಮುಖದಲ್ಲಿ ಮಂದಹಾಸ: ಬಿತ್ತನೆ ಚುರುಕು



### ಜಗಳೂರು ತಾಲ್ಲೂಕಿನಲ್ಲಿ ಮುಂಗಾರು ಮಳೆ ಉತ್ತಮ

ಬಿ.ಪಿ.ಸುಭಾನ್

ಜಗಳೂರು, ಜೂ.10- ಕಳೆದ ಸಾಲಿನಲ್ಲಿ ಮಳೆ ಕೊರತೆಯಿಂದ ಬರ ಅನುಭವಿಸಿದ್ದ ತಾಲ್ಲೂಕಿನ ರೈತರ ಮುಖದಲ್ಲಿ, ಈ ವರ್ಷ ಮಂದಹಾಸ ಮೂಡಿದೆ. ಕಾರಣ ಮುಂಗಾರು ಮಳೆ ಅಧಿಕ ಪ್ರಮಾಣದಲ್ಲಿ ಜಗಳೂರು ತಾಲೂಕಿನಲ್ಲಿ ಸುರಿದಿದೆ.

ತಾಲ್ಲೂಕಿನ ಈವರೆಗಿನ ವಾಡಿಕೆ ಮಳೆ 122.3ಮಿ.ಮೀ. ವಾಸ್ತವಿಕವಾಗಿ ಬಂದಿರುವ ಮಳೆ ಪ್ರಮಾಣ 187.4ಮಿ.ಮೀ. ಅಂದರೆ ಶೇ.54 ರಷ್ಟು ಅಧಿಕ ಮಳೆಯಾಗಿದೆ. ಬಿತ್ತನೆ ಕಾರ್ಯ ಚುರುಕುಗೊಂಡಿದೆ.

ಕಳೆದ ಹಲವು ದಿನಗಳಿಂದ ತಾಲ್ಲೂಕಿನಾದ್ಯಂತ ಉತ್ತಮ ಮಳೆ ಯಾಗುತ್ತಿದೆ. ಕೆಲವು ಪಪ್ಪಾಯಿ, ಅಡಿಕೆ, ಬಾಳೆ ತೋಟಗಳಲ್ಲಿ ನೀರು ನಿಂತು ಬೆಳೆಗ್ಗೆ ಹಾನಿಯಾಗಿದ್ದರೆ, ಇನ್ನೂ ಕೆಲವು ಕಡೆ ಜಮೀನಿನಲ್ಲಿ ನೀರು ನಿಂತು ಬಿತ್ತನೆಗೆ ತೊಂದರೆ ಆಗಿದೆ.

ಕಳೆದ ವರ್ಷ ಹಿಂಗಾರು ಮತ್ತು ಮುಂಗಾರು ಮಳೆಯ ಕೊರತೆಯಿಂದಾಗಿ ತಾಲ್ಲೂಕಿನ ಬಹುತೇಕ ಕೆರೆ, ಗೋಕಟ್ಟೆ, ಚೆಕ್ ಡ್ಯಾಮ್ ಗಳು ಸಂಪೂರ್ಣವಾಗಿ ಒಣಗಿ ಹೋಗಿದ್ದವು. ಆದರೆ ಮುಂಗಾರು ಪೂರ್ವ ಹಾಗೂ ಮುಂಗಾರು ಮಳೆಯ ಆರಂಭದಲ್ಲಿಯೇ ತಾಲ್ಲೂಕಿನ ಬಹುತೇಕ ಕೆರೆಗಳಿಗೆ ಮತ್ತು ಗೋಕಟ್ಟೆಗಳಲ್ಲಿ ನೀರು ತುಂಬಿದೆ.

ಕಳೆದ ಎರಡು ವರ್ಷಗಳಿಂದ ಖಾಲಿ ಇದ್ದ ಗಡಿಮಾಕುಂಟೆ ಕೆರೆಗೆ ಆರಂಭದಲ್ಲಿ ಎಂಟು ಅಡಿ ನೀರು ಸಂಗ್ರಹವಾಗಿದ್ದು, ಈ ಭಾಗದ ರೈತರಲ್ಲಿ ಸಂತಸ ಮೂಡಿದೆ. ಉಳಿದಂತೆ ಗುರುಸಿದ್ದಾಪುರ, ಕ್ಯಾಸೇನಹಳ್ಳಿ, ಗೌರಿಪುರ, ಕೆಳಗೋಟೆ ಮುಂತಾದ ಕೆರೆಗಳಲ್ಲಿ ಅಲ್ಪ ಪ್ರಮಾಣದ ನೀರು ಸಂಗ್ರಹ ವಾಗಿದೆ. ಗೋಕಟ್ಟೆಗಳು ತುಂಬಿಹರಿಯುತ್ತಿವೆ.

ತಾಲ್ಲೂಕಿನ ಪ್ರಮುಖ (2ನೇ ಪುಟಕ್ಕೆ)

## ಬಿತ್ತನೆ ಬೀಜ, ಗೊಬ್ಬರ ದರ ಇಳಿಕೆಗೆ ಆಗ್ರಹ

### ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯಾದ್ಯಂತ ಚಳವಳಿ: ಹೆಚ್.ಆರ್. ಬಸವರಾಜಪ್ಪ



ದಾವಣಗೆರೆ, ಜೂ.10- ಬರ ಪರಿಹಾರ, ವಿಮೆ ನೀಡುವಲ್ಲಿ ರೈತರಿಗೆ ಮೋಸ, ಹೂಲದಲ್ಲಿ ದಾರಿ ಸಮಸ್ಯೆ, ಅಕ್ರಮ-ಸಕ್ರಮ ಪಂಪ್‌ಸೆಟ್, ಪಹಣಿ, ಮುಟೇಷನ್‌ಗೆ ಹೆಚ್ಚಿನ ಹಣ ವಸೂಲಿ, ಕಳಸಾ ಬಂಡೂರು ಯೋಜನೆಗೆ ಸರ್ಕಾರದ ಮೇಲೆ ಒತ್ತಡ ಹೇರುವುದು ಸೇರಿದಂತೆ ರೈತರ ವಿವಿಧ ಸಮಸ್ಯೆಗಳ ಕುರಿತು ನಗರದ ಎಪಿಎಂಸಿ ಸಭಾಂಗಣದಲ್ಲಿ ಸೋಮವಾರ ಸಭೆಯಲ್ಲಿ ಚರ್ಚಿಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಮಿತಿ ಸಭೆಯಲ್ಲಿ ದಾವಣಗೆರೆ ಜಿಲ್ಲೆಯ ವಿವಿಧ ತಾಲ್ಲೂಕುಗಳೂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ರೈತ ಮುಖಂಡರು ಪಾಲ್ಗೊಂಡಿದ್ದರು.

> ದಾವಣಗೆರೆಯಲ್ಲಿಂದು ನಡೆದ ರಾಜ್ಯ ಸಮಿತಿ ಸಭೆಯಲ್ಲಿ ರೈತರ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಸರ್ಕಾರ ನಿರ್ಲಕ್ಷ್ಯ ವಹಿಸಿದರೆ, ರಾಜ್ಯದಾದ್ಯಂತ ಚಳವಳಿ ನಡೆಸಲಾಗುವುದು.
>
> - ಹೆಚ್.ಆರ್. ಬಸವರಾಜಪ್ಪ

ರಾಜ್ಯ ಸರ್ಕಾರ ಬರ ಪರಿಹಾರದ ಹಣ ಸರಿಯಾದ ರೀತಿ ರೈತರಿಗೆ ವಿತರಿಸುತ್ತಿಲ್ಲ. ಬರಗಾಲದಿಂದ ಬೀಳು ಬಿಟ್ಟ ಹಾಗೂ ಬೆಳೆ ಅಳಿಸಿದ ಜಮೀನಿಗೂ ಪರಿಹಾರ ಕೊಡಬೇಕು ಎಂದು ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಸಭೆಯಲ್ಲಿ ಆಗ್ರಹಿಸಿದರು.

ಹಿಂದಿನ ಸರ್ಕಾರ ಎನ್‌ಡಿಆರ್‌ಎಫ್ ಮಾರ್ಗ ಸೂಚಿಯ ಪರಿಹಾರದೊಂದಿಗೆ ಹೆಚ್ಚುವರಿ ಪರಿಹಾರ ನೀಡಿತ್ತು. ಅದೇ ರೀತಿ ಇಂದಿನ ಸರ್ಕಾರವೂ ಸಹ ಎನ್‌ಡಿಆರ್‌ಎಫ್ ಫಂಡ್ ಜೊತೆ ಕಳೆದ ಸರ್ಕಾರ ನೀಡಿದಷ್ಟು ಪರಿಹಾರವನ್ನಾದರೂ ನೀಡಬೇಕು ಎಂದರು.

ಬಿತ್ತನೆ ಬೀಜ ಹಾಗೂ ಗೊಬ್ಬರದ ದರವನ್ನು ಶೇ.50 ರಿಂತ 70ರಷ್ಟು ಹೆಚ್ಚಿಸಲಾಗಿದ್ದು, ಕೂಡಲೇ ಬೆಲೆ ಇಳಿಸಬೇಕು. ಎಂ.ಆರ್.ಪಿ. ದರಕ್ಕಿಂತ ಹೆಚ್ಚು ದರದಲ್ಲಿ ಬೀಜ, ಗೊಬ್ಬರ ಮಾರಾಟ ಮಾಡಿದರೆ ಕೃಷಿ ಇಲಾಖೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಮಾರಾಟಗಾರರು ಬೆಲೆ ಹಾಗೂ ತಮ್ಮಲ್ಲಿರುವ ಸ್ಟಾಕ್ ಬಗ್ಗೆ ನಾಮಫಲಕದಲ್ಲಿ ನಮೂದಿಸುವಂತೆ ಕ್ರಮ (2ನೇ ಪುಟಕ್ಕೆ)

## ಸಂಪುಟ : ಉನ್ನತ ಹುದ್ದೆಗಳಲ್ಲಿ ಯಥಾಸ್ಥಿತಿ

### ಮಹತ್ವದ ಸಚಿವಾಲಯಗಳು ಬಿಜೆಪಿ ಬಳಿಯೇ ಮುಂದುವರಿಕೆ

ನವದೆಹಲಿ, ಜೂ. 10 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಂಪುಟದಲ್ಲಿ ಅಮಿತ್ ಷಾ, ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್ ಹಾಗೂ ಎಸ್. ಜೈಶಂಕರ್ ಅವರು ಉನ್ನತ ಹುದ್ದೆಗಳಲ್ಲಿ ಮುಂದುವರೆದಿದ್ದಾರೆ.

ಅಮಿತ್ ಷಾ ಅವರು ಗೃಹ, ರಾಜನಾಥ್ ರಕ್ಷಣೆ, ಸೀತಾರಾಮನ್ ಹಣಕಾಸು ಹಾಗೂ ಜೈಶಂಕರ್ ಅವರು ವಿದೇಶಾಂಗ ಸಚಿವಾಲಯಗಳಲ್ಲಿ ಮುಂದುವರೆದಿದ್ದಾರೆ. ಈ ನಾಲ್ಕು ಸಚಿವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಭದ್ರತೆ ಕುರಿತ ಸಂಪುಟ ಉಪ ಸಮಿತಿಯಲ್ಲಿರುತ್ತಾರೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವಾಲಯ ಪಡೆದಿದ್ದಾರೆ. ಜೆ.ಪಿ. ನಡ್ಡಾ ಅವರು ಆರೋಗ್ಯ ಸಚಿವಾಲಯ ಪಡೆದಿದ್ದಾರೆ. ನಡ್ಡಾ ಅವರು ಮೊದಲ ಅವಧಿಯಲ್ಲೂ ಇದೇ ಖಾತೆ ಹೊಂದಿದ್ದರು.

ನಿತಿನ್ ಗಡ್ಕರಿ ಅವರು ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದಲ್ಲಿ ಮುಂದುವರೆದಿದ್ದಾರೆ. ಹರಿಯಾಣದ ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ವಸತಿ ಹಾಗೂ ನಗರ ವ್ಯವಹಾರಗಳ ಮತ್ತು ವಿದ್ಯುತ್ ಸಚಿವಾಲಯ ಪಡೆದಿದ್ದಾರೆ.

ಅಶ್ವಿನಿ ವೈಷ್ಣವ್ ಅವರು ಮಹತ್ವದ ರೈಲ್ವೆ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾ ಲಯದಲ್ಲಿ ಮುಂದುವರೆಯುವ (4ನೇ ಪುಟಕ್ಕೆ)

## ಕಿಸಾನ್ ನಿಧಿ ಹಣ ಬಿಡುಗಡೆಗೆ ಮೋದಿ ಮೊದಲ ಆದೇಶ

ನವದೆಹಲಿ, ಜೂ. 10 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಅವಧಿಗೆ ಅಧಿಕಾರಕ್ಕೆ ಬಂದ ತಕ್ಷಣವೇ ರೈತರಿಗೆ ಪಿಎಂ ಕಿಸಾನ್ ನಿಧಿ ಯೋಜನೆಯ ಹಣ ಬಿಡುಗಡೆಗೆ ಆದೇಶಿಸಿದ್ದಾರೆ.

ಈ ಯೋಜನೆಯ ಅನ್ವಯ ಪ್ರತಿ ರೈತರಿಗೆ ವರ್ಷಕ್ಕೆ ಮೂರು ಕಂತುಗಳಲ್ಲಿ 6 ಸಾವಿರ ರೂ. ನೀಡಲಾಗುತ್ತದೆ. ಈ ಯೋಜನೆಯ 17ನೇ ಕಂತಿನಲ್ಲಿ 9.3 ಕೋಟಿ ರೈತರಿಗೆ 20 (2ನೇ ಪುಟಕ್ಕೆ)

## 3 ಕೋಟಿ ಮನೆಗಳ ನಿರ್ಮಾಣಕ್ಕೆ ಕೇಂದ್ರದ ನೆರವು

ನವದೆಹಲಿ, ಜೂ. 10 – ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿ.ಎಂ.ಎ.ವೈ.) ಮೂಲಕ ಮೂರು ಕೋಟಿ ಮನೆಗಳ ನಿರ್ಮಾಣಕ್ಕೆ ಸರ್ಕಾರದ ನೆರವು ನೀಡಲು ಕೇಂದ್ರ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮೂರನೇ ಅವಧಿಯ ಮೊದಲ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಂಪುಟ ಸಭೆಯಲ್ಲಿ ಎನ್.ಡಿ.ಎ.ದ ಎಲ್ಲಾ ಮಿತ್ರ ಪಕ್ಷಗಳ ಸಚಿವರು ಭಾಗಿಯಾಗಿದ್ದರು. ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ 3 (4ನೇ ಪುಟಕ್ಕೆ)

## ಲೋಡ್ ಶೆಡ್ಡಿಂಗ್ ಆಗದಂತೆ ವಿದ್ಯುತ್ ಪೂರೈಕೆ : ಜಾರ್ಜ್

ಬೆಂಗಳೂರು, ಜೂ. 10 - ಮಳೆ ಹಾಗೂ ಜಲಾಶಯಗಳಲ್ಲಿ ನೀರಿನ ಲಭ್ಯತೆ ಕೊರತೆ ಮಧ್ಯೆಯೂ ಬೇಸಿಗೆಯಲ್ಲಿ ಯಾವುದೇ ಲೋಡ್ ಶೆಡ್ಡಿಂಗ್ ಇಲ್ಲದೆ, ರೈತರು, ವಿದ್ಯಾರ್ಥಿ ಸಮುದಾಯಕ್ಕೆ ಹೆಚ್ಚು ಸಮಸ್ಯೆಯಾಗದಂತೆ ವಿದ್ಯುತ್ ಪೂರೈಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯುತ್ ಖರೀದಿ ಹೆಚ್ಚು ಹೊರೆಯಾಗದಂತೆ ಅನ್ಯ ರಾಜ್ಯಗಳೊಂದಿಗೆ ವಿದ್ಯುತ್ ವಿನಿಮಯ ಮಾಡಿಕೊಳ್ಳಲಾಗಿತ್ತು. ಪಂಜಾಬ್ ಮತ್ತು ಉತ್ತರ ಪ್ರದೇಶದೊಂದಿಗೆ (4ನೇ ಪುಟಕ್ಕೆ)




## ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



### ಶ್ರೀಮತಿ ಕೆಂಚಮ್ಮನವರು

(ನಿಧನ : 11.06.2013)

ದಿ|| ತಿಮ್ಮಣ್ಣ ಟಿ.ಕೆ. ಇವರ ಧರ್ಮಪತ್ನಿ

ಶ್ರೇಷ್ಠ ಸಂಸ್ಕಾರ, ಆದರ್ಶ ವ್ಯಕ್ತಿತ್ವ, ಸರಳ ಸಜ್ಜನಿಕೆಯ ಜೀವನದಿಂದ ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಪ್ರೀತಿ-ವಾತ್ಸಲ್ಯದಿಂದ ನಮ್ಮನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದ್ದೀರಿ. ಆಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಶ್ರೀ ದುರ್ಗಾಂಬಿಕಾ ವೆಜಿಟೇಬಲ್ಸ್

ನಾಗರಾಜ್ ಟಿ., ಫೋನ್ : 97401 06630

ಹಣ್ಣು ಮತ್ತು ತರಕಾರಿ ದಲ್ಲಾಲಿ ಮಂಡಿ

TDK

ಮಳಿಗೆ ಸಂಖ್ಯೆ -7, ಎಪಿಎಂಸಿ ಯಾರ್ಡ್, ರೈತ ಭವನ ಪಕ್ಕ,KSRTC ಬಸ್ ನಿಲ್ದಾಣದ ಎದುರು, ದಾವಣಗೆರೆ-2.

# ಮತ್ತಿಹಳ್ಳಿ ಗ್ರಾಮದ ರೈತರಿಗೆ ಬಾರದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ

**ಹರಪನಹಳ್ಳಿ : ಆತಂಕದಲ್ಲಿ ರೈತರು**

ಹರಪನಹಳ್ಳಿ, ಜೂ. 10 - ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸುಮಾರು ನೂರಾರು ರೈತರು 2023-2024ನೇ ಸಾಲಿನ ಪ್ರಧಾನ ಮಂತ್ರಿ ಫಸಲ ಭೀಮ ಯೋಜನೆ ಅಡಿಯಲ್ಲಿ ಬೆಳೆ ವಿಮೆ ಮಾಡಿಸಿರುತ್ತಾರೆ, ಬೀತ್ತನೆ ಮಾಡಿದ ಬೆಳೆ ಸಂಪೂರ್ಣ ನಷ್ಟವಾಗಿದ್ದರು ಬೆಳೆ ವಿಮೆಯ ಹಣ ಬಂದಿರುವುದಿಲ್ಲ. ಆದ ಕಾರಣ ಬೆಳೆ ವಿಮೆ ಗ್ರಾಮ ರೈತರು ಆತಂಕದಲ್ಲಿದ್ದಾರೆ.

ತಾಲ್ಲೂಕಿನ ಮತ್ತಿಹಳ್ಳಿ ಸೇರಿದಂತೆ ಅನೇಕ ಗ್ರಾಮದ ರೈತರು ತಾಲ್ಲೂಕಿನ ಕೆಲವು ರೈತರು ತಮ್ಮ ಗ್ರಾಮದಲ್ಲಿ ವಾಸವಾಗಿರುತ್ತಾರೆ. ರೈತರು ಅವರ ಮಾಲಿಕತ್ವದ ಹಕ್ಕಿನ ಜಮೀನಗಳಲ್ಲಿ ವ್ಯವಸಾಯದಿಂದ ಜೀವನ ಮಾಡುತ್ತಿದ್ದರೂ ಸಹ ಕೆಲವು ಗ್ರಾಮದ ಗ್ರಾಮಲೆಕ್ಕಾಧಿಕಾರಿಗಳ ನಿರ್ಲಕ್ಷ್ಯತನದಿಂದ ರೈತರು ಅವರ ಜಮೀನುಗಳಲ್ಲಿ ಬೆಳೆ ಬೆಳೆದರು ಸಹ ಬೆಳೆ ಇಲ್ಲವೆಂದು ಸಂಬಂಧ ಪಟ್ಟ ಅಧಿಕಾರಿಗಳು ವರದಿಯನ್ನು ನೀಡಿರುತ್ತಾರೆ

ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು 2023-2024 ಸಾಲಿನ ಪ್ರಧಾನ ಮಂತ್ರಿ ಫಸಲ ಭೀಮ ಯೋಜನೆ ಅಡಿಯಲ್ಲಿ ಹಣ ನೀಡುವಂತೆ ಒತ್ತಾಯಿಸಿದರು. ರೈತರು ಬೆಳೆ ವಿಮೆ ಮಾಡಿಸಿರುತ್ತೇವೆ. ತಮ್ಮ ಜಮೀನುಗಳಲ್ಲಿ ಭಿತ್ತನೆ ಮಾಡಿದ ಬೆಳೆಗಳು, ಮಳೆ ಇಲ್ಲದೆ ಸಂಪೂರ್ಣ ಫಸುಲು ಬಂದಿರುವುದಿಲ್ಲ. ಆದಾ ಕಾರಣ ರಾಜ್ಯ ಸರ್ಕಾರ ಹರಪನಹಳ್ಳಿ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿರುತ್ತೆದೆ.

ಹರಪನಹಳ್ಳಿ ತಾಲೂಕನ್ನು ಬರಗಾಲ ತಾಲ್ಲೂಕು ಎಂದು ಘೋಷಣೆ ಮಾಡಿದ ನಂತರ ಕೆಲ ರೈತರಿಗೆ ಮಾತ್ರ ಒಂದನೇ ಕಂತು ವಿಮೆ ಹಣ ಬಂದಿರುತ್ತದೆ. ಇನ್ನುಳಿದ ವಿಮೆ ಮಾಡಿಸಿದ ರೈತರೆಗೆ ಒಂದನೇ ಕಂತು ವಿಮೆ ಹಣ ಸಹ ಬಂದಿರುವುದಿಲ್ಲ. ವಿಮೆ ಮಾಡಿಸಿದ ರೈತರೆಗೆ ಬರಬೇಕಾದ ಬಾಕಿ ವಿಮೆ ಹಣ ಇಲ್ಲಿವರಿಗೂ ಸಹ ಬಂದಿರುವುದಿಲ್ಲ.

ರೈತರು ಬಾಕಿ ಹಣ ಬಾರದೆ ಇರುವ ಕಾರಣ ವಿಮ ಕಂಪನಿಗೆ ಕರೆ ಮಾಡಿ ವಿಚಾರಿಸಿದಾಗ ನಿಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೆಳೆಗಳು ಹಾನಿ ಆಗಿರುವುದಿಲ್ಲವೆಂದು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಗ್ರಾಮ ಲೆಕ್ಕಾಧಿಕಾರಿಗಳು ಕಛೇರಿಯಲ್ಲಿ ಇದ್ದುಕೊಂಡು ವರದಿ ಸಲ್ಲಿಸಿರುತ್ತಾರೆ ಆದಕಾರಣ ಸಂಬಂಧ ಪಟ್ಟ ಅಧಿಕಾರಿಗಳು ವಿಮೆ ಹಣ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ನಾವು ವಿಮೆ ಮಾಡಿಸಿದ ಜಮೀನುಗಳಿಗೆ ಯಾವ ಒಬ್ಬ ಅಧಿಕಾರಿಗಳು ಬಂದು ಸಮೀಕ್ಷೆ ಮಾಡದೆ ರೈತರಿಗೆ ವಂಚನೆ ಮಾಡುವ ಉದ್ದೇಶದಿಂದ ವಿಮ ಕಂಪನಿಯಾಂದಿಗೆ ಮಿಲಾಪಿಯಾಗಿ ರೈತರೆಗೆ ವಿಮೆ ಹಣ ನೀಡದೆ ವಂಚನ ಮಾಡಿರುತ್ತಾರೆ ಎಂದು ಮತ್ತಿಹಳ್ಳಿ ಗ್ರಾಮದ ಕೆ.ದೊಡ್ಡ ನಿಂಗಪ್ಪ, ಕೋಟ್ರೇಶ್, ಕೆ.ಮಂಗಳಾ ಗೌರಿ ಆರೋಪಿಸಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್ಸೆಸ್ 94: ಬಾಪೂಜಿ ಎಂಬಿಎ ಕಾಲೇಜಿನಲ್ಲಿ ರಕ್ತದಾನ



ದಾವಣಗೆರೆ, ಜೂ.10- ನಗರದ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಬಾವಿಸಂ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪನವರ 94ನೇ ವರ್ಷದ ಹುಟ್ಟುಹಬ್ಬದ ಸವಿನೆನಪಿಗಾಗಿ, ಎಸ್ ಎಸ್ ಕೇರ್ ಟ್ರಸ್ಟ್, ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬಾಪೂಜಿ ಆಸ್ಪತ್ರೆ ಇವರುಗಳ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಬಾಪೂಜಿ ಎಂಬಿಎ ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಎಚ್.ವಿ ಶಿಬಿರದ ಅಧ್ಯಕ್ಷತೆ ವಹಿಸಿದ್ದರು. ಜೆಜೆಎಂಎಂಸಿ ಪ್ರಾಂಶುಪಾಲ ರಾದ ಡಾ. ಶುಕ್ಲಾ ಶೆಟ್ಟಿ, ಬಾಪೂಜಿ ಆಸ್ಪತ್ರೆ ಮೆಡಿಕಲ್ ಡೈರೆಕ್ಟರ್ ಡಾ. ಕುಮಾರ್ ಡಿ. ಎಸ್., ಪ್ರೊಫೆಸರ್ ಡಾ.ಧನ್ಯಕುಮಾರ್ ನೇತೃತ್ವದಲ್ಲಿ ಶಿಬಿರ ನಡೆಸಲಾಯಿತು.

ಶಿಬಿರದಲ್ಲಿ ಬಾಪೂಜಿ ಎಂಬಿಎ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳೂ ಸೇರಿ 36 ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.

## ಡಾ. ಪ್ರಭಾ ಗೆಲುವಿಗೆ ನಿಟುವಳ್ಳಿಯಲ್ಲಿ ಕಾರ್ಯಕರ್ತರ ಸಂಭ್ರಮೋತ್ಸವ



ದಾವಣಗೆರೆ, ಜೂ.10- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿರುವುದಕ್ಕೆ ನಿಟ್ಟುವಳ್ಳಿಯ ಶ್ರೀರಾಮ ನಗರದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ ಪರಸ್ಪರ ಸಿಹಿ ಹಂಚಿ ಗೆಲುವು ಸಂಭ್ರಮಿಸಿದರು.

ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದಾವಣಗೆರೆಯನ್ನು ಅತ್ಯುತ್ತಮ ನಗರವನ್ನಾಗಿ ಮಾಡಿದ್ದಾರೆ. ಆದರೂ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಹಿನ್ನ ಡೆಗೆ ಕಾರಣ ಏನು ಎಂಬುದನ್ನು ಪತ್ತೆ ಮಾಡಬೇಕು ಎಂದು ಚರ್ಚಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್. ಹೆಚ್. ನಾಗಭೂಷಣ್ ಮಾತನಾಡಿ, ಗೆಲುವು ಮತ್ತು ಮತ ಗಳಿಕೆಯಿಂದ ತೃಪ್ತಿ ಹೊಂದದೇ ಚುನಾವಣೆ ಮುಗಿದ ಮೇಲೂ ಪಕ್ಷದ ಸಂಘಟನೆಗೆ ಆದ್ಯತೆ ನೀಡಿದರೆ ಪಕ್ಷವು ಬೇರು ಮಟ್ಟದಿಂದ ಬೆಳೆಯಲು ಸಾಧ್ಯ ಎಂದು ಹೇಳಿದರು. ಪಾಲಿಕೆ ಮಾಜಿ ಉಪ ಮಹಾ ಪೌರರಾದ ಹೆಚ್. ಮಂಜಮ್ಮ, ಪಾಲಿಕೆ ಮಾಜಿ ಸದಸ್ಯರಾದ ರೇಣುಕಮ್ಮ ಶಾಂತರಾಜ್, ಟಿ.ಡಿ. ಹಾಲೇಶ್, ಡಿ.ಎಸ್.ಕೆ. ಪರಶುರಾಮ್, ನಿಟುವಳ್ಳಿ ಎಸ್. ಪ್ರವೀಣ್ ಕುಮಾರ್, ಆನಗೋಡು ನಾಗರಾಜ್, ಹೆಚ್.ಎಂ. ಅರುಣ್, ಬಾಲರಾಜ್, ಚಂದ್ರಮ್ಮ, ಸಾವಿತ್ರಮ್ಮ, ರತ್ನಮ್ಮ, ನೇತ್ರಮ್ಮ, ಪ್ರತಾಪ್ ಮತ್ತಿತರರಿದ್ದರು.

# ಕುಂಬಳೂರು : ಹೃದಯಸ್ಪರ್ಶಿ ಗುರುವಂದನಾ ಕಾರ್ಯಕ್ರಮ





**ಕೆ.ಸಿರಸಾಚಾರ್ ಸೇರಿ 52 ಶಿಕ್ಷಕರುಗಳಿಗೆ ಸನ್ಮಾನ**

ಮಲೇಬೆನ್ನೂರು, ಜೂ.10- ಕುಂಬಳೂರು ಗ್ರಾಮದ ಬಸವ ಗುರುಕುಲದಲ್ಲಿ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳು ಸೇರಿ ನಿನ್ನೆ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮವು ಹೃದಯಸ್ಪರ್ಶಿಯಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಶರಣ ಬಿ.ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಮೇ 31 ರಂದು ವಯೋನಿವೃತ್ತಿ ಹೊಂದಿರುವ ಮುಖ್ಯ ಶಿಕ್ಷಕ ಕೆ.ಸಿರಸಾಚಾರ್ ಅವರಿಗೆ ಮತ್ತು ಬಸವ ಗುರುಕುಲ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದ 52ಕ್ಕೂ ಹೆಚ್ಚು ಶಿಕ್ಷಕರುಗಳಿಗೆ ಗುರುವಂದನಾ ಕಾರ್ಯಕ್ರಮದಲ್ಲಿ ಸನ್ಮಾನಿಸಿ, ಗೌರವಿಸಿ, ಅವರ ಸೇವೆಯನ್ನು ಸ್ಮರಿಸುವ ಮೂಲಕ ಹಿರಿಯ ವಿದ್ಯಾರ್ಥಿಗಳು ಮಾದರಿಯಾದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಭೀಮಸಮುದ್ರದ ನಿವೃತ್ತ ಮುಖ್ಯ ಶಿಕ್ಷಕ ಎಸ್. ಮಂಜುನಾಥಚಾರಿ ಮಾತನಾಡಿ, ಹಿರಿಯರಿಗೆ ಗೌರವ ಕೊಡುವುದನ್ನು ಕಲಿತವರು ಬದುಕಿನಲ್ಲಿ ಉನ್ನತ ಸ್ಥಾನಕ್ಕೆ ಹೋಗುತ್ತಾರೆ ಎಂಬುದಕ್ಕೆ ನೀವೇ ಸಾಕ್ಷಿ ಎಂದು ತಮ್ಮ ಶಿಷ್ಯ ವೃಂದವನ್ನು ಶ್ಲಾಘಿಸಿದರು.

ಮಕ್ಕಳಿಗೆ ಪೋಷಕರು ಒಳ್ಳೆಯ ಸಂಸ್ಕಾರ ಕಲಿಸಬೇಕು. ಮಕ್ಕಳು ಪೋಷಕರು, ಶಿಕ್ಷಕರು ಹೇಳುವ ಮಾತುಗಳನ್ನು ಕೇಳಿ ನಡೆದುಕೊಂಡರೆ, ನಿಮ್ಮ ಜೀವನವೂ ಸಾರ್ಥಕವಾಗುತ್ತದೆ.

ಶರಣ ಸಂಗಮ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಎಂ.ಎಸ್.ಮಂಜುನಾಥ್ ಮಾತನಾಡಿ, ಬಸವ ಗುರುಕುಲ ಶಾಲೆಯಿಂದಾಗಿ ಸುಸಂಸ್ಕೃತ ವ್ಯಕ್ತಿತ್ವ ನಿರ್ಮಾಣವಾಗಿದೆ ಎಂಬುದಕ್ಕೆ ಈ ಸಮಾರಂಭ ಸಾಕ್ಷಿಯಾಗಿದೆ ಎಂದರು.

ಮಲೇಬೆನ್ನೂರಿನ ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಮಾತನಾಡಿ, ಬಸವ ಗುರುಕುಲ ಸತ್ಸಂಗದ ಶಾಲೆಯಾಗಿ ಬೆಳೆದು ಬಂದಿದ್ದು, ಇದರ ಸಂಸ್ಥಾಪಕರಾದ ಶಿವಾನಂದ ಗುರೂಜಿ ನೇತೃತ್ವದಲ್ಲಿ ಬಸವ ಗುರುಕುಲದ ಬೆಳ್ಳಿಹಬ್ಬ ಆಚರಣೆ ಆಗಲಿ ಎಂದು ಆಶಿಸಿದರು.

ಹಳೇ ವಿದ್ಯಾರ್ಥಿಗಳಾದ ಮಂಜುನಾಥ್, ಪ್ರಕಾಶ್, ರೇಖಾ, ಚೈತ್ರ, ಶಿಕ್ಷಕಿ ಜಯ್ಯಮ್ಮ ಮಾತನಾಡಿ, ತಾವು ಓದಿದ ದಿನಗಳನ್ನು ಮೆಲುಕು ಹಾಕಿದರು.

ಗುರುವಂದನೆ ಸ್ವೀಕರಿಸಿದ ಕೆ.ಸಿರಸಾಚಾರ್ ಮಾತನಾಡಿ, ಇಂತಹ ಸಮಾರಂಭವನ್ನು ನನ್ನ ಕನಸ್ಸಿನಲ್ಲೂ ನಿರೀಕ್ಷೆ ಮಾಡಿರಲಿಲ್ಲ. ನಾವು ಕಷ್ಟಪಟ್ಟು ಈ ಶಾಲೆಯನ್ನು ಮತ್ತು ನಿಮ್ಮನ್ನು ಬೆಳೆಸಿದ್ದಕ್ಕೆ ನಮ್ಮ ಬದುಕು ಸಾರ್ಥಕವಾಯಿತೆಂದು ಭಾವುಕರಾದರು.

ಶರಣ ಬಿ.ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕ ಎ.ಬಿ.ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ನಿವೃತ್ತ ಶಿಕ್ಷಕರಾದ ಹನುಮಂತಪ್ಪ ಜಾಡರ್, ಸಿ.ಮಾಲತೇಶ್, ಮೆಳ್ಳೇಕಟ್ಟೆ ಬಸವರಾಜಪ್ಪ, ಪುಷ್ಪಾವತಿ, ಬಸಮ್ಮ ಶಿಕ್ಷಕರಾದ ಕೆ.ಭೀಮಪ್ಪ, ಸುರೇಶ್, ರೇಣುಕಾ, ತ್ಯಾವಣಿಗಿ ರುದ್ರಪ್ಪ, ಗುಂಡಗತ್ತಿ ಅಂಜಿನಪ್ಪ, ಹಾಲಿವಾಣದ ತಿಪ್ಪೇಸ್ವಾಮಿ, ತ್ಯಾವಣಿಗಿ ರವಿಶಂಕರ್, ತರಗನಹಳ್ಳಿ ಬಸವನಗೌಡ, ರಾಜಶೇಖರ್, ಯಲವಟ್ಟಿ ಹನುಮಂತನಾಯ್ಕ, ಜಿಗಳಿಯ ಬೆಣ್ಣೇರ್ ರಮೇಶ್, ಶಿವಕುಮಾರ್ ದೊಡ್ಡಮನಿ, ಗಂಗನಗೌಡ ಮತ್ತು ಪೊಲೀಸ್ ವಿಜಯ ಕುಮಾರಿ, ಪ್ರತಿಭಾ, ಡಿ.ಜ್ಯೋತಿ ಸೇರಿ ಒಟ್ಟು 52 ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಗ್ರಾ.ಪಂ. ಅಧ್ಯಕ್ಷೆ ಉಮಾದೇವಿ, ಎಂ.ಹೆಚ್.ಶಿವರಾಮಚಂದ್ರಪ್ಪ, ವಿದ್ಯಾಸಂಸ್ಥೆಯ ಹಳೇಮನಿ ಶಂಭುಲಿಂಗಪ್ಪ, ಕೆ.ತೀರ್ಥಪ್ಪ, ಹೆಚ್.ಬಿ.ಶಿವಕುಮಾರ್, ಗೌಡ್ರ ಪರಮೇಶ್ವರಪ್ಪ, ಬಿ.ಶಂಭುಲಿಂಗಪ್ಪ, ಕೆ. ಕಾಮರಾಜ್, ಲಯನ್ಸ್ ಶಾಲೆ ಮುಖ್ಯ ಶಿಕ್ಷಕ ಚಂದ್ರಶೇಖರ್, ಚಿಟ್ಟಕ್ಕಿ ಶಾಲೆಯ ಆಡಳಿತಾಧಿಕಾರಿ ಎಸ್.ಕೆ.ಕುಮಾರ್, ಗುತ್ತಿಗೆದಾರ ಸಿ.ಹೆಚ್. ರವಿ, ಭದ್ರಾ ಕಾಲೇಜಿನ ಸಂಕೇತ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಹಿರಿಯ ವಿದ್ಯಾರ್ಥಿಗಳಾದ ಕೆ.ಡಿ. ಗೋವಿಂದ್, ಪ್ರಕಾಶ್, ರಮೇಶ್‌ಚಾರಿ, ಹರೀಶ್, ಪೊಲೀಸ್ ಬಸವರಾಜ್, ಸಂತೋಷ್ ಕುಮಾರ್, ಎ.ಹೆಚ್.ಆಂಜನೇಯ, ಎಂ.ಹೆಚ್. ಶರಣ್, ನಿರಂಜನ್‌ಮೂರ್ತಿ, ಹನುಮೇಶ್, ಜಗದೀಶ್, ಕಿರಣ್, ಆಂಜನೇಯ, ಕೆ.ಶಂಭು, ಉಡೇದರ ಸಿದ್ದೇಶ್ ಸೇರಿದಂತೆ ಇನ್ನೂ ಅನೇಕರು ಶ್ರಮವಹಿಸಿ ಈ ಕಾರ್ಯಕ್ರಮವನ್ನು ಸಂಘಟಿಸಿದ್ದರು.

# ರೈತರಲ್ಲಿ ಮಂದಹಾಸ: ಬಿತ್ತನೆ ಚುರುಕು

(1ನೇ ಪುಟದಿಂದ) ವಾಣಿಜ್ಯ ಬೆಳೆಯಾದ ಮೆಕ್ಕೆಜೋಳ ಇದುವರೆಗೂ 23,000 ಹೆಕ್ಟೇರ್ ಬಿತ್ತನೆಯಾಗಿದೆ. ಉಳಿದಂತೆ ತೊಗರಿ 2300, ಹತ್ತಿ 2100 ಮತ್ತು ರಾಗಿ 850 ಹೆಕ್ಟೇರ್ ಬಿತ್ತನೆಯಾಗಿದೆ. ಬಿಳಿಚೋಡು ಹೋಬಳಿ ಮತ್ತು ಸೊಕ್ಕೆ ಹೋಬಳಿಯಲ್ಲಿ ಹೆಚ್ಚಿನ ಕ್ಷೇತ್ರ ಬಿತ್ತನೆಯಾಗಿದ್ದು, ಕಸಬಾ ಹೋಬಳಿವ್ಯಾಪ್ತಿಯ ಹಳ್ಳಿಗಳಲ್ಲಿ ಬಿತ್ತನೆ ಕಾರ್ಯ ಪ್ರಗತಿಯಲ್ಲಿದೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜ ಸಮರ್ಪಕವಾಗಿದ್ದು, ಇದುವರೆಗೆ ಮೆಕ್ಕೆಜೋಳ 856 ಕ್ವಿಂಟಲ್ ತೊಗರಿ 105 ಕ್ವಿಂಟಲ್ ಹಾಗೂ ಸೂರ್ಯಕಾಂತಿ 450 ಕ್ವಿಂಟಲ್ ಬಿತ್ತನೆ ಬೀಜ ಮಾರಾಟವಾಗಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಿಥುನ್ ಕಿಮಾವತ್ ಮಾಹಿತಿ ನೀಡಿದ್ದಾರೆ.

ರೈತರು ಬಿತ್ತನೆ ಬೀಜ ಹಾಗೂ ಕೀಟನಾಶಕ ಮತ್ತು ಗೊಬ್ಬರವನ್ನು ಅಧಿಕೃತ ಮಾರಾಟಗಾರರಿಂದಲೇ ಖರೀದಿಸಬೇಕು ಮತ್ತು ಸಂಬಂಧಿಸಿದ ಖರೀದಿ ರಸೀದಿಯನ್ನು ಪಡೆದು ಇಟ್ಟುಕೊಂಡಿರಬೇಕು ಎಂದು ಸಲಹೆ ನೀಡಿದ್ದಾರೆ. ನ್ಯಾನೋ ಯೂರಿಯ, ಡಿಎಪಿ ರಸಗೊಬ್ಬರ ಮಾರುಕಟ್ಟೆಗೆ ಬಂದಿರುತ್ತದೆ ರೈತರು ಇದರ ಸದುಪ ಯೋಗ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

**ಕೃಷಿ ಚಟುವಟಿಕೆ ಚುರುಕು**

ಜಗಳೂರು ತಾಲ್ಲೂಕಿನಾದ್ಯಂತ ಹದ ಮಳೆಯಾಗಿರುವ ಕಾರಣ ಕೃಷಿ ಚಟುವಟಿಕೆ ಬಿರುಸುನಿಂದ ನಡೆದಿದೆ. ಬಿತ್ತನೆ ಬೀಜ, ಗೊಬ್ಬರದ ಖರೀದಿಗಾಗಿ ರೈತರು ಅಂಗಡಿಗಳ ಮುಂದೆ ಸಾಲು ಸಾಲು ನಿಂತಿರುವ ದೃಶ್ಯ ಸಾಮಾನ್ಯವಾಗಿ ಕಂಡುಬಂದಿದೆ. ರೈತ ಸಂಪರ್ಕ ಕೇಂದ್ರಗಳ ಹೊರತಾಗಿಯೂ ಪಟ್ಟಣದ ಪ್ರಮುಖ ಅಧಿಕೃತ ಮಾರಾಟಗಾರರಲ್ಲೂ ಬಿತ್ತನೆ ಬೀಜ ಖರೀದಿಗೆ ರೈತರು ಮುಂದಾಗಿದ್ದಾರೆ. ತಾಲ್ಲೂಕಿನ ರೈತರು ಕಳೆದ ವರ್ಷದ ಬರದಿಂದ ಮುಕ್ತಗೊಂಡು ಈ ವರ್ಷ ಉತ್ತಮ ಮಳೆ ಹಾಗೂ ಉತ್ತಮ ಫಸಲಿನ ನಿರೀಕ್ಷೆಯಲ್ಲಿ ಇದ್ದಾರೆ.

## 3ನೇ ಬಾರಿಗೆ ಮೋದಿ ಪ್ರಧಾನಿ ಹಳ್ಳಿಹಾಳ್‌ನಲ್ಲಿ ಬಿಜೆಪಿ ಸಂಭ್ರಮ



ಮಲೇಬೆನ್ನೂರು, ಜೂ.10- ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ತಕ್ಷಣ ಹಳ್ಳಿಹಾಳ್ ಗ್ರಾಮದಲ್ಲೂ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು. ಹೆಚ್.ಕೆ.ನಟರಾಜ್, ಕೆ.ಎಸ್. ವೀರನಗೌಡ, ಹೆಚ್.ಕೆ.ಜಗದೀಶ್, ಭಾನುವಳ್ಳಿ ಬಸಣ್ಣ, ಮಾಳಗಿ ತಿಮ್ಮಣ್ಣ, ಹೆಚ್.ಲಿಂಗರಾಜ್, ಹೆಚ್.ಟಿ. ಬಸವನಗೌಡ, ಹೆಚ್.ಪಿ.ಅನಿಲ್, ಹೆಚ್.ಟಿ. ಮಂಜುನಾಥ್ ಮತ್ತಿತರರು ಸಂಭ್ರಮಾಚರಣೆಯಲ್ಲಿದ್ದರು.

## ನೈಸರ್ಗಿಕ ಸೌಂದರ್ಯವನ್ನು ಉಳಿಸಿ, ಬೆಳೆಸಬೇಕು : ಐಗೂರು ಬಸವರಾಜ್



ಹರಿಹರ, ಜೂ.10- ನೈಸರ್ಗಿಕ ಸೌಂದರ್ಯದ ತನ್ಮಯತೆಯನ್ನು ಉಳಿಸಿ, ಬೆಳೆಸಬೇಕಾದರೆ ಪ್ರತಿಯೊಬ್ಬರು ಪರಿಸರ ಸಂರಕ್ಷಣೆಗೆ ಮುಂದಾಗಬೇಕಿದೆ ಎಂದು ಪೌರಾಯುಕ್ತ ಐಗೂರು ಬಸವರಾಜ್ ಅಭಿಪ್ರಾಯಪಟ್ಟರು.

ನಗರಸಭೆ ವತಿಯಿಂದ ವಿವಿಧ ವಾರ್ಡುಗಳಲ್ಲಿ ನಡೆದ ಪರಿಸರ ದಿನಾಚರಣೆ ಸಮಾರಂಭದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪರಿಸರ ಸಮತೋಲನ ಕಾಪಾಡಲು ನಾಗರಿಕರು ಹೆಚ್ಚು ಸಸ್ಯಗಳನ್ನು ನೆಡಬೇಕು. ಜೊತೆಗೆ ಅವುಗಳನ್ನು ಸರಿಯಾದ ರೀತಿಯಲ್ಲಿ ಲಾಲನೆ, ಪೋಷಣೆ ಮಾಡಿ ಸಂರಕ್ಷಣೆ ಮಾಡಿದರೆ ಎಲ್ಲಾ ಜೀವಿಗಳನ್ನು ಪೋಷಣೆ ಮಾಡಿದಂತಾಗುತ್ತದೆ. ಪರಿಸರ ಸಂವೃದ್ದಿ ಇದ್ದರೆ ಆರೋಗ್ಯಕರ ಜೀವನವನ್ನು ನಡೆಸಬಹುದು. ಇತ್ತಿಚೀನ ದಿನಗಳಲ್ಲಿ ಕಾಲ ಮಾನಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ಮಳೆ ಆಗದೆ ಇರುವುದರಿಂದ ಪ್ರಕೃತಿ ತನ್ನತನವನ್ನು ಕಳೆದುಕೊಳ್ಳುತ್ತಿದ್ದು, ಹಾಗಾಗಿ ಪರಿಸರ ಸಂರಕ್ಷಣೆಯನ್ನು ಪ್ರತಿಯೊಬ್ಬರೂ ಮಾಡಿದಾಗ ಆರೋಗ್ಯಕರ ಜೀವನವನ್ನು ನಡೆಸಲಿಕ್ಕೆ ಮತ್ತು ಮುಂದಿನ ಪೀಳಿಗೆಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯ ಇಲಾಖೆಯ ರವಿಪ್ರಕಾಶ್, ಸಂತೋಷ್, ಮ್ಯಾನೇಜರ್ ಶಿವಕುಮಾರ್, ತಿಪ್ಪೇಸ್ವಾಮಿ, ರಮೇಶ್, ಆಫ್ರಿನ್, ಗಾಯತ್ರಿ ಇತರರು ಹಾಜರಿದ್ದರು.

## ಮತ್ತೆ ಮೋದಿ : ಹಳೇಬಾತಿಯಲ್ಲಿ 300 ಕೆ.ಜಿ. ಲಾಡು ವಿತರಣೆ



ದಾವಣಗೆರೆ, ಜೂ. 10 - ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಸುಮಾರು 300 ಕೆ.ಜಿ. ಲಾಡು ವಿತರಣೆ ಮನೆ, ಮನೆಗೂ ಒಂದು ಕೆಜಿಯಂತೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಶಿವಕುಮಾರ್, ಸಿದ್ದೇಶ್, ಹಳೇಬಾತಿ ಶಂಕರಮೂರ್ತಿ, ನವೀನ್, ಹನುಮಂತ, ಸುರೇಶ್, ಹೇಮಂತ್, ಜಿ.ಎಸ್. ಮಲ್ಲಿಕಾರ್ಜುನಪ್ಪ, ಅಶೋಕ್, ಚಂದ್ರಪ್ಪ, ಗೋವಿಂದಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ಚಳ್ಳಕೆರೆಯಲ್ಲಿ ಪರಿಸರ ದಿನಾಚರಣೆ



ಚಳ್ಳಕೆರೆ, ಜೂ.10- ಇಲ್ಲಿನ ಟೌನ್‌ಕ್ಲಬ್ ಮತ್ತು ಗ್ರಂಥಾಲಯದ ಓದುಗರ ಸಂಯುಕ್ತಾಶ್ರಯದಲ್ಲಿ ಬುಧವಾರ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಸಸಿ ನೆಟ್ಟು, ನೀರುಣಿಸಿ ಮಾತನಾಡಿದ ಮಾಜಿ ನಗರಸಭಾ ಅಧ್ಯಕ್ಷ ಕೆ.ಜೆ. ಅಶೋಕ್ ಅವರು, ಗ್ರಂಥಾಲಯದಲ್ಲಿ ಓದುವ ಮಕ್ಕಳಿಗೆ ಉತ್ತಮವಾಗಿ ಓದಿ ಸಾಧಿಸುವ ಮೂಲಕ ತಂದೆ-ತಾಯಿಗಳಿಗೆ ಹೆಸರು ತರುವಂತೆ ತಿಳಿಸಿದರು.

ಕ್ಲಬ್‌ನ ಕಾರ್ಯದರ್ಶಿ ಜಿ. ಶ್ರೀನಿವಾಸ್, ಗ್ರಂಥಪಾಲಕ ಡಿ. ತಿಮ್ಮರಾಯ್, ವೀರಭದ್ರಪ್ಪ ಮತ್ತು ಓದುಗರಾದ ಅಭಿಷೇಕ್, ರೂಪಾ, ಕಾಂಚನಾ, ಸಹನಾ, ಪ್ರಿಯಾಂಕ, ಅವಿನಾಶ್ ಇದ್ದರು.

**ಟಿ.ಎನ್. ಉಮೇಶಯ್ಯ ನಿಧನ**



ನಂ. 199, ರಿಂಗ್ ರಸ್ತೆ, ಎಸ್‌ಪಿಎಸ್ ನಗರ ಎದುರು, ಹೊಸಕ್ಯಾಂಪ್, ಲಾಸ್ಟ್ ಬಸ್‌ಸ್ಟಾಫ್ ಹತ್ತಿರದ ವಾಸಿ

**ಟಿ.ಎನ್. ಉಮೇಶಯ್ಯ**

ಇವರು ದಿನಾಂಕ 10.6.2024ರ ಸೋಮವಾರ ಸಂಜೆ 4ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.06.2024ರ ಮಂಗಳವಾರ ಮಧ್ಯಾಹ್ನ 12 ಕ್ಕೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ,**

**ಮೊ : 95389 68730, 94805 98793, 99169 28905**

**ಹತ್ತನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀ ಶ್ಯಾಗಲೆ ಜಿ. ನಾಗಪ್ಪನವರು**

ಮರಣ : 11.06.2014

**ಸಂಸ್ಥಾಪಕ ಕಾರ್ಯದರ್ಶಿಗಳು, ಶ್ರೀ ಮಲ್ಲಿಕಾರ್ಜುನ ವಿದ್ಯಾ ಸಂಸ್ಥೆ (ರಿ.) ಶ್ಯಾಗಲೆ, ಮಾಜಿ ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು (11.06.2023) ಕಳೆದರೂ, ನಿಮ್ಮ ನೆನಪು ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಗುರಪ್ಪರ ವಂಶಸ್ಥರು, ಶ್ಯಾಗಲೆ ಹಾಗೂ ಬಂಧು-ಮಿತ್ರರು.**



## ಆನಂದ ಮೆಡಿಕಲ್ ಅಕಾಡೆಮಿ ಸಾಧನೆ

ದಾವಣಗೆರೆ, ಜೂ. 10- ನೀಟ್ 2024ರ ಫಲಿತಾಂಶದಲ್ಲಿ ಆನಂದ ಮೆಡಿಕಲ್ ಅಕಾಡೆಮಿ ಶಿಕ್ಷಣ ಸಂಸ್ಥೆ ಸಾಧನೆ ಮಾಡಿದೆ.

ಶ್ರೇಷ್ಠ ಎಂ.ಪಿ. 720ಕ್ಕೆ 640, ನಂದೀಶ್ 597, ಗಾಯತ್ರಿ 580 ಅಂಕಗಳನ್ನು ಗಳಿಸಿದ್ದಾರೆ. ನೀಟ್ ಪರೀಕ್ಷೆಯಲ್ಲಿ ಸಂಸ್ಥೆಯ 10 ವಿದ್ಯಾರ್ಥಿಗಳು 500 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.

# ಬಿತ್ತನೆ ಬೀಜ, ಗೊಬ್ಬರ ದರ ಇಳಿಕೆಗೆ ಆಗ್ರಹ

(1ನೇ ಪುಟದಿಂದ) ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸ್ವಯಂ ಆರ್ಥಿಕ ವೆಚ್ಚ ಯೋಜನೆ ಕೈ ಬಿಟ್ಟು ಮೊದಲಿನಿಂದಲೇ ಅಕ್ರಮ ಸಕ್ರಮ ಯೋಜನೆಯಡಿ ಹಣ ಕಟ್ಟಿಸಿಕೊಂಡು ಹೊಸ ಸಂಪರ್ಕಕ್ಕೆ ಅನುಮತಿ ನೀಡಬೇಕು. ಬಗರ್ ಹುಕ್ಕುಂ ಸಾಗುವಳಿ ದಾರರಿಗೆ ಕಾಲ ಮಿತಿಯೊಳಗೆ ಹಕ್ಕುಪತ್ರ ಕೊಡಬೇಕು. ಗ್ಯಾರಂಟಿ ಯೋಜನೆಗಳಿಂದಾಗಿ ಹಣ ಕ್ರೋಢೀಕರಿಸಲು ಪಹಣಿ, ಮುಟೇಷನ್, ಜಾತಿ ಪ್ರಮಾಣ ಪತ್ರ, ಸ್ಟಾಂಪ್ ಡ್ಯೂಟಿ ಎಲ್ಲದರ ಬೆಲೆ ಏರಿಕೆಯಾಗಿದೆ. ಈ ಕ್ರಮ ಜನ ಸಾಮಾನ್ಯರ ಮೇಲೆ ಬರೆ ಎಳೆದಂತಾಗಿದೆ. ಕೂಡಲೇ ಬೆಲೆ ಏರಿಕೆ ಕೈ ಬಿಡಬೇಕು.

ಬರ ಪರಿಹಾರದ ಹಣ ಸೇರಿದಂತೆ ಸರ್ಕಾರ ನೀಡುವ ಮಾಸಾಶನಗಳನ್ನು ಬ್ಯಾಂಕ್‌ನವರು ಸಾಲಕ್ಕೆ ಜಮಾ ಮಾಡಿಕೊಳ್ಳುವುದನ್ನು ಕೂಡಲೇ ಕೈ ಬಿಡಬೇಕು. ಬರಗಾಲ ಇರುವುದರಿಂದ ಸಾಲ ವಸೂಲಿಗಾಗಿ ಒತ್ತಾಯಿಸಬಾರದು. ಸಾಲದಿಂದ ರೈತ ಆತ್ಮಹತ್ಯೆ ಮಾಡಿಕೊಂಡರೆ, ಅದಕ್ಕೆ ಫೈನಾನ್ಸ್ ಹಾಗೂ ಬ್ಯಾಂಕ್‌ನವರೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಬಸವರಾಜಪ್ಪ ಎಚ್ಚರಿಸಿದರು.

ಬೇಡಿಕೆಗಳ ಈಡೇರಿಸುವಂತೆ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ರಾಜ್ಯದಾದ್ಯಂತ ಚಳವಳಿ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು.

ಇದಕ್ಕೂ ಮುನ್ನ ನಡೆದ ಚರ್ಚೆ ವೇಳೆ ರೈತರಿಗೆ ನೀಡುತ್ತಿದ್ದ ಸ್ಪಿಂಕ್ಲರ್ ಬೆಲೆಯನ್ನು ದುಪ್ಪಟ್ಟು ಮಾಡಲಾಗಿದೆ. ಅಲ್ಲದೇ ಅದಕ್ಕೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ರೈತರ ಉತ್ಪನ್ನಗಳಿಗೆ ಜಿಎಸ್‌ಟಿ ಇಲ್ಲ. ಆದರೆ ನಾವು ಕೃಷಿಗಾಗಿ ಕೊಳ್ಳುವ ಸಾಮಾಗ್ರಿಗಳಿಗೆ ಜಿಎಸ್‌ಟಿ ಕೊಡಬೇಕಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯುವ ಅಗತ್ಯವಿದೆ ಎಂದು ರೈತ ಮುಖಂಡರೊಬ್ಬರು ಸಭೆಯಲ್ಲಿ ಪ್ರಸ್ತಾಪಿಸಿದರು.

ಶಿವಮೊಗ್ಗದ ರಾಘವೇಂದ್ರ ಮಾತನಾಡಿ, ರಾಜ್ಯ ಸರ್ಕಾರವು ಶೂನ್ಯ ಬಡ್ಡಿ ದರದಲ್ಲಿ ಐದು ಲಕ್ಷ ರೂ. ಸಾಲ ನೀಡುವುದಾಗಿ ಹೇಳಿತ್ತು. ಆದರೆ ಇದುವರೆಗೂ ಯಾರಿಗೂ ಸಾಲ ನೀಡಿಲ್ಲ. ಈ ಬಗ್ಗೆ ಸಂಘದಿಂದ ಒತ್ತಾಯಿಸಬೇಕು ಎಂದರು.

ಪ್ರಸ್ತುತ ದಿನಗಳಲ್ಲಿ ಅನ್ನಕ್ಕಿಂತ ಹೆಚ್ಚು ವಿಷಯವನ್ನೇ ಉಣ್ಣುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸಾವಯವ ಬೆಳೆಗಾರರಿಗೆ ಪ್ರೋತ್ಸಾಹಿಸಬೇಕು. ಪ್ರತ್ಯೇಕ ಸಮಿತಿ ರಚಿಸಿ ಸಾವಯವ ಬೆಳೆಗಾರರನ್ನು ಗುರುತಿಸಿ, ಉತ್ತೇಜನ ನೀಡಬೇಕು ಎಂದರು.

ಜಮೀನಿನಲ್ಲಿ ಜಿಪಿಎಸ್ ಮಾಡಲು ಬಂದಾಗ ಬೇರೆ ಸರ್ವೇ ನಂಬರ್ ನಮೂದಾಗುತ್ತದೆ. ಹಲವೆಡೆ ಈ ರೀತಿ ತಾಂತ್ರಿಕ ವ್ಯತ್ಯಾಸಗಳಾಗುತ್ತಿದ್ದು. ಇದನ್ನು ಸರಿಪಡಿಸಬೇಕು. ಏತ ನೀರಾವರಿ ಯೋಜನೆಗಳಿಗೆ ಹಣ ಮಂಜೂರಾದರೂ ಕಾಮಗಾರಿಗಳು ನಡೆಯುತ್ತಿಲ್ಲ. ಈ ಬಗ್ಗೆ ಸಂಘದಿಂದ ತನಿಖೆ ನಡೆಸಬೇಕಿದೆ ಎಂದು ಮುಖಂಡರೊಬ್ಬರು ಒತ್ತಾಯಿಸಿದರು.

ಕೊಪ್ಪಳದ ಜಿಲ್ಲಾ ಸಂಘದ ಪದಾಧಿಕಾರಿಯೊಬ್ಬರು, ಪಹಣಿ, ಮ್ಯುಟೇಷನ್ ಪಡೆಯುವ ಶುಲ್ಕವನ್ನು ಹೆಚ್ಚಿಸಲಾಗಿದೆ. ನಮ್ಮ ದಾಖಲೆ ಪಡೆಯಲು ನಾವೇಕೆ ಹೆಚ್ಚು ಹಣ ಕೊಡಬೇಕು? ಮೊದಲೇ ಬೆಳೆ ಹಾನಿಯಿಂದ ತತ್ತರಿಸುವ ರೈತರಿಗೆ ಶುಲ್ಕದ ಹೊರೆ ಕಷ್ಟವಾಗಿದೆ ಎಂದರು.

ಶಕ್ತಿ ಯೋಜನೆಯಿಂದಾಗಿ ಮಹಿಳೆಯರು ಉಚಿತವಾಗಿ ಓಡಾಡುವುದು ಹೆಚ್ಚಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹಾಗೂ ಕೃಷಿ ಕಾರ್ಯಗಳಿಗೆ ನಗರಗಳಿಗೆ ಬರುವ ಪುರುಷರಿಗೂ ಕಷ್ಟವಾಗಿದೆ. ರಾಜ್ಯ ಸರ್ಕಾರ ಪ್ರತಿ ತಾಲ್ಲೂಕಿಗೆ ಐದು ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಬೇಕೆಂದು ಮತ್ತೋರ್ವ ರೈತ ಮುಖಂಡ ಆಗ್ರಹಿಸಿದರು.

ಕಾರ್ಯಾಧ್ಯಕ್ಷ ಅಬ್ಬಣಿ ಶಿವಪ್ಪ ಕೋಲಾರ, ಈಚಘಟ್ಟದ ಸಿದ್ದವೀರಪ್ಪ ಚಿತ್ರದುರ್ಗ, ಕಾರ್ಯದರ್ಶಿ ಅಮಿನ್ ಪಾಷಾ ದಿದ್ದಿಗಿ, ಉಪಾಧ್ಯಕ್ಷ ಹೊನ್ನೂರು ಮುನಿಯಪ್ಪ, ಇಟ್ಟೂರು ರಾಜು, ವಿಜಯನಗರ ಜಿಲ್ಲೆ ಭರಮಣ್ಣ ಕೊಟ್ಟೂರು, ದಾವಣಗೆರೆಯ ರಾಜು, ಬಸವರಾಜ್, ಪಾಲಾಕ್ಷಿ, ಅಭಿ, ಖ್ಯಾತನಳ್ಳಿ ರಾಜಣ್ಣ, ಕಲಬುರ್ಗಿ ಮಹಾಂತಗೌಡ, ಅಲ್ಲಾ ಪಟೇಲ ಶಿವಪೂರ, ಹಸನ ಪಾಟೀಲ, ಸಿದ್ದನಗೌಡ ಬಿ.ಪೊಲೀಸ್ ಪಾಟೀಲ್, ಭೀಮನಗೌಡ ಪಾಟೀಲ ಇತರರು ಸಭೆಯಲ್ಲಿದ್ದರು.



# ಮೋದಿ ಮಂತ್ರಿಮಂಡಲದ ಸಚಿವರ ಖಾತೆಗಳು

| | |
|---|---|
| ನರೇಂದ್ರ ಮೋದಿ | ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ, ಅಣುಶಕ್ತಿ ಇಲಾಖೆ, ಬಾಹ್ಯಾಕಾಶ ಇಲಾಖೆ, ಪ್ರಮುಖ ನೀತಿ ನಿರೂಪಣೆ ಮತ್ತು ಹಂಚಿಕೆಯಾಗದ ಎಲ್ಲ ಖಾತೆಗಳು. |
| ಸಂಪುಟ ಖಾತೆ | |
| ರಾಜನಾಥ್ ಸಿಂಗ್ | ರಕ್ಷಣೆ |
| ಅಮಿತ್ ಷಾ | ಗೃಹ, ಸಹಕಾರ |
| ನಿತಿನ್ ಗಡ್ಕರಿ | ರಸ್ತೆ ಸಾರಿಗೆ ಮತ್ತು ಹೆದ್ದಾರಿ |
| ಜೆ.ಪಿ.ನಡ್ಡಾ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಗೊಬ್ಬರ |
| ಶಿವರಾಜ್ ಸಿಂಗ್ ಚೌಹಾಣ್ | ಕೃಷಿ ಮತ್ತು ರೈತರ ಕಲ್ಯಾಣ, ಗ್ರಾಮೀಣಾಭಿವೃದ್ಧಿ |
| ನಿರ್ಮಲಾ ಸೀತಾರಾಮನ್ | ಹಣಕಾಸು, ಕಾರ್ಪೊರೇಟ್ ವ್ಯವಹಾರ |
| ಎಸ್.ಜೈಶಂಕರ್ | ವಿದೇಶಾಂಗ |
| ಮನೋಹರ್ ಲಾಲ್ | ವಸತಿ ಮತ್ತು ನಗರ ವ್ಯವಹಾರ, ಇಂಧನ |
| ಹೆಚ್.ಡಿ.ಕುಮಾರಸ್ವಾಮಿ | ಬೃಹತ್ ಕೈಗಾರಿಕೆ, ಉಕ್ಕು |
| ಪಿಯೂಶ್ ಗೋಯಲ್ | ವಾಣಿಜ್ಯ ಮತ್ತು ಕೈಗಾರಿಕೆ |
| ಧರ್ಮೇಂದ್ರ ಪ್ರಧಾನ್ | ಶಿಕ್ಷಣ |
| ಜಿತನ್ ರಾಮ್ ಮಾಂಝಿ | ಸಣ್ಣ ಹಾಗೂ ಮಧ್ಯಮ ಕೈಗಾರಿಕೆ |
| ರಾಜೀವ್ ರಂಜನ್ ಸಿಂಗ್ | ಪಂಚಾಯತ್ ರಾಜ್, ಮೀನುಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ |
| ಸರ್ಬಾನಂದ ಸೋನಾವಲ್ | ಬಂದರು ಹಾಗೂ ಜಲಮಾರ್ಗ |
| ವೀರೇಂದ್ರ ಕುಮಾರ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಕೆ.ರಾಮಮೋಹನ್ ನಾಯ್ಡು | ನಾಗರಿಕ ವಿಮಾನಯಾನ |
| ಪ್ರಹ್ಲಾದ್ ಜೋಶಿ | ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರ, ನವೀಕರಣ ಇಂಧನ |
| ಜುವಾಲ್ ಓರಂ | ಬುಡಕಟ್ಟು ವ್ಯವಹಾರ |
| ಗಿರಿರಾಜ್ ಸಿಂಗ್ | ಜವಳಿ |
| ಅಶ್ವಿನಿ ವೈಷ್ಣವ್ | ಮಾಹಿತಿ ಮತ್ತು ಪ್ರಸಾರ, ರೈಲ್ವೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ |
| ಜ್ಯೋತಿರಾದಿತ್ಯ ಸಿಂಧಿಯಾ | ಟೆಲಿಕಾಂ ಮತ್ತು ಈಶಾನ್ಯ ಅಭಿವೃದ್ಧಿ |
| ಭೂಪೇಂದ್ರ ಯಾದವ್ | ಪರಿಸರ, ಅರಣ್ಯ |
| ಗಜೇಂದ್ರ ಸಿಂಗ್ ಶೆಖಾವತ್ | ಸಂಸ್ಕೃತಿ ಮತ್ತು ಪ್ರವಾಸ |
| ಅನ್ನಪೂರ್ಣಾದೇವಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ |
| ಕಿರಣ್ ರಿಜಿಜು | ಸಂಸದೀಯ ವ್ಯವಹಾರ |
| ಹರ್ದೀಪ್ ಸಿಂಗ್ ಪುರಿ | ಪೆಟ್ರೋಲಿಯಂ ನೈಸರ್ಗಿಕ ಅನಿಲ |
| ಮನ್‌ಸುಖ್ ಮಾಂಡವೀಯ | ಕಾರ್ಮಿಕ ಹಾಗೂ ಯುವ ವ್ಯವಹಾರ, ಕ್ರೀಡೆ |
| ಜಿ.ಕಿಶನ್ ರೆಡ್ಡಿ | ಕಲ್ಲಿದ್ದಲು ಹಾಗೂ ಗಣಿ |
| ಚಿರಾಗ್ ಪಾಸ್ವಾನ್ | ಆಹಾರ ಸಂಸ್ಕರಣೆ |
| ಸಿ.ಆರ್.ಪಾಟೀಲ್ | ಜಲಶಕ್ತಿ |
| ರಾಜ್ಯ ಸಚಿವರು - ಸ್ವತಂತ್ರ | |
| ರಾವ್ ಇಂದ್ರಜಿತ್‌ಸಿಂಗ್ | ಅಂಕಿ ಅಂಶ, ಯೋಜನೆ |
| ಜಿತೇಂದ್ರ ಸಿಂಗ್ | ಭೂ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ |
| ಅರ್ಜುನ್ ರಾಮ್ ಮೇಘವಾಲ್ | ಕಾನೂನು ಮತ್ತು ನ್ಯಾಯ |
| ಜಾಧವ್ ಪ್ರತಾಪ್‌ರಾವ್ | ಆಯುಷ್ |
| ಜಯಂತ್ ಚೌಧರಿ | ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆ |
| ರಾಜ್ಯ ಸಚಿವರು | |
| ಜಿತಿನ್ ಪ್ರಸಾದ್ | ವಾಣಿಜ್ಯ ಮತ್ತು ಕೈಗಾರಿಕೆ, ಮಾಹಿತಿ ತಂತ್ರಜ್ಞಾನ |
| ಶ್ರೀಪಾದ್ ನಾಯ್ಕ್ | ಇಂಧನ |
| ಪಂಕಜ್ ಚೌಧರಿ | ಹಣಕಾಸು |
| ಕ್ರಿಶನ್ ಪಾಲ್ | ಸಹಕಾರ |
| ರಾಮ್‌ದಾಸ್ ಅತಾವಳೆ | ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ |
| ರಾಮನಾಥ್ ಠಾಕೂರ್ | ಕೃಷಿ, ರೈತರ ಸಬಲೀಕರಣ |
| ನಿತ್ಯಾನಂದ ರಾಯ್ | ಗೃಹ |
| ಅನುಪ್ರಿಯಾ ಪಟೇಲ್ | ಆರೋಗ್ಯ, ರಾಸಾಯನಿಕ, ಗೊಬ್ಬರ |
| ವಿ.ಸೋಮಣ್ಣ | ಜಲಶಕ್ತಿ, ರೈಲ್ವೆ |
| ಚಂದ್ರಶೇಖರ್ ಪೆಮ್ಮಸಾನಿ | ಗ್ರಾಮೀಣ ಅಭಿವೃದ್ಧಿ, ಟೆಲಿಕಾಂ |
| ಎಸ್.ಪಿ.ಸಿಂಗ್ ಬಘೇಲ್ | ಪಶುಸಂಗೋಪನೆ, ಮೀನುಗಾರಿಕೆ, ಪಂಚಾಯತ್ ರಾಜ್ |
| ಶೋಭಾ ಕರಂದ್ಲಾಜೆ | ಸಣ್ಣ, ಮಧ್ಯಮ ಕೈಗಾರಿಕೆ, ಕಾರ್ಮಿಕ |
| ಕೀರ್ತಿವರ್ಧನ್ ಸಿಂಗ್ | ಪರಿಸರ, ಅರಣ್ಯ, ವಿದೇಶಾಂಗ ವ್ಯವಹಾರ, ಹವಾಮಾನ ಬದಲಾವಣೆ |
| ಬಿ.ಎಲ್.ವರ್ಮಾ | ಗ್ರಾಹಕ ವ್ಯವಹಾರ, ಆಹಾರ ಪೂರೈಕೆ, ಸಾಮಾಜಿಕ ನ್ಯಾಯ, ಸಬಲೀಕರಣ |
| ಶಾಂತನು ಠಾಕೂರ್ | ಬಂದರು, ಜಲಸಾರಿಗೆ |
| ಸುರೇಶ್ ಗೋಪಿ | ನೈಸರ್ಗಿಕ ಅನಿಲ, ಪೆಟ್ರೋಲಿಯಂ, ಪ್ರವಾಸೋದ್ಯಮ |
| ಎಲ್.ಮುರುಗನ್ | ಮಾಹಿತಿ ಪ್ರಸಾರ, ಸಂಸದೀಯ ವ್ಯವಹಾರ |
| ಅಜಯ್ ಟಮ್ಟಾ | ಸಾರಿಗೆ, ಹೆದ್ದಾರಿ |
| ಬಂಡಿ ಸಂಜಯ್ ಕುಮಾರ್ | ಗೃಹ |
| ಕಮಲೇಶ್ ಪಾಸ್ವಾನ್ | ಗ್ರಾಮೀಣಾಭಿವೃದ್ಧಿ |
| ಭಗೀರಥ ಚೌಧರಿ | ಕೃಷಿ, ರೈತರ ಸಬಲೀಕರಣ |
| ಸತೀಶ್‌ಚಂದ್ರ ದುಬೆ | ಕಲ್ಲಿದ್ದಲು, ಗಣಿಗಾರಿಕೆ |
| ಸಂಜಯ್ ಸೇಠ್ | ರಕ್ಷಣೆ |
| ರವನೀತ್ ಸಿಂಗ್ | ಆಹಾರ ಸಂಸ್ಕರಣೆ ಕೈಗಾರಿಕೆ, ರೈಲ್ವೆ |
| ದುರ್ಗಾದಾಸ್ ಉಕೆ | ಬುಡಕಟ್ಟು ವ್ಯವಹಾರ |
| ರಕ್ಷಾ ನಿಖಿಲ್ ಖಡ್ಸೆ | ಯುವಜನ ಕ್ರೀಡೆ |
| ಸುಕಾಂತ ಮಜುಂದಾರ್ | ಶಿಕ್ಷಣ, ಈಶಾನ್ಯ ರಾಜ್ಯಗಳ ಅಭಿವೃದ್ಧಿ |
| ಸಾವಿತ್ರಿ ಠಾಕೂರ್ | ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ |
| ಟೊಖನ್ ಸಾಹು | ವಸತಿ ಮತ್ತು ನಗರಾಭಿವೃದ್ಧಿ |
| ರಾಜ್‌ಭೂಷಣ್ ಚೌಧರಿ | ಜಲಶಕ್ತಿ |
| ಭೂಪತಿರಾಜು ಶ್ರೀನಿವಾಸ್ ವರ್ಮಾ | ಬೃಹತ್ ಕೈಗಾರಿಕೆ, ಉಕ್ಕು |
| ಹರ್ಷ ಮಲ್ಹೋತ್ರಾ | ಸಹಕಾರ ವ್ಯವಹಾರ, ರಸ್ತೆ ಸಾರಿಗೆ, ಹೆದ್ದಾರಿ |
| ನಿಮುಬೆನ್ ಬಂಬನಿಯಾ | ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ |
| ಮುರಳೀಧರ್ ಮೊಹಲ್ | ಸಹಕಾರ, ನಾಗರಿಕ ವಿಮಾನಯಾನ |
| ಜಾರ್ಜ್ ಕುರಿಯನ್ | ಅಲ್ಪಸಂಖ್ಯಾತ, ಮೀನುಗಾರಿಕೆ ಮತ್ತು ಪಶುಸಂಗೋಪನೆ |
| ಪಬಿತ್ರ ಮಾರ್ಗರಿಟ | ಜವಳಿ, ವಿದೇಶಾಂತ ವ್ಯವಹಾರ |

# ಜೂ. 24ರವರೆಗೆ ಪ್ರಜ್ವಲ್‌ಗೆ ನ್ಯಾಯಾಂಗ ಬಂಧನ

ಬೆಂಗಳೂರು, ಜೂ. 10 - ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೈಲೇ ಗತಿಯಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 10 ದಿನಗಳ ಎಸ್‌ಐಟಿ ಕಸ್ಟಡಿ ಅವಧಿ ಮುಗಿದ ಹಿನ್ನೆಲೆಯಲ್ಲಿ ಜನಪ್ರತಿನಿಧಿ ಗಳ ನ್ಯಾಯಾಲಯ ಜೂನ್ 24ರ ವರೆಗೆ, ಅಂದರೆ ಎರಡು ವಾರಗಳ ನ್ಯಾಯಾಂಗ ಬಂಧನಕ್ಕೆ ನೀಡಿದೆ. ಆದೇಶದ ನಂತರ ಪ್ರಜ್ವಲ್‌ನನ್ನು ಪರಪ್ಪನ ಅಗ್ರಹಾರ ಜೈಲಿಗೆ ಸ್ಥಳಾಂತರಿ ಸಲಾಗಿದೆ. ಇಂದು ಬಸವನಗುಡಿಯ ಅವರ ನಿವಾಸದಲ್ಲಿ ಸ್ಥಳ ಮಹಜರು ನಡೆಸಿದ ಬಳಿಕ ಪ್ರಜ್ವಲ್ ಅವರನ್ನು 42ನೇ ಎಸಿಎಂಎಂ ಕೋರ್ಟ್‌ಗೆ ಕರೆತರಲಾಯಿತು.

ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಧೀಶರು. ಪ್ರಜ್ವಲ್ ಅವರನ್ನು ಉದ್ದೇಶಿಸಿ, ಕಸ್ಟಡಿ ಅವಧಿಯಲ್ಲಿ ಏನಾದರೂ ತೊಂದರೆ ಆಯಿತೇ ಎಂದು ಪ್ರಶ್ನಿಸಿದಾಗ, ಅದಕ್ಕೆ ಅವರು ಇಲ್ಲ ಎಂದು ಉತ್ತರಿಸಿದರು.

ತದನಂತರ ಈ ಪ್ರಕರಣದಲ್ಲಿ ನಮಗೆ ಪ್ರಜ್ವಲ್ ಕಸ್ಟಡಿ ಅವಶ್ಯಕತೆ ಇಲ್ಲ ಎಂದು ಎಸ್‌ಐಟಿ ಪರ ವಕೀಲರು ನ್ಯಾಯಾಲಯದ ಮುಂದೆ ಸ್ಪಷ್ಟನೆ ನೀಡಿ ಮುಚ್ಚಿದ ಲಕೋಟೆಯೊಂದನ್ನು ನೀಡಿದರು.

ಲಕೋಟೆ ಪಡೆದ ನಂತರ ನ್ಯಾಯಾಧೀಶರು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ವಹಿಸಿ, ಇದಕ್ಕೆ ನಿಮ್ಮ ತಕರಾರು ಏನಾದರೂ ಇದೆಯೇ ಎಂದು ಪ್ರಜ್ವಲ್ ವಕೀಲರನ್ನು ಪ್ರಶ್ನಿಸಿದಾಗ, ಇಲ್ಲ ಎಂದು ಉತ್ತರಿಸಿದರು.

# ಕೊರಿಯಾ ಗಡಿಯಲ್ಲಿ ಲೌಡ್‌ಸ್ಪೀಕರ್ ಸಂಘರ್ಷ, ಬಲೂನುಗಳ ಜಟಾಪಟಿ





ಸಿಯೋಲ್, ಜೂ. 10 – ದಕ್ಷಿಣ ಕೊರಿಯಾ ಹಾಗೂ ಉತ್ತರ ಕೊರಿಯಾಗಳ ನಡುವೆ ಲೌಡ್‌ಸ್ಪೀಕರ್ 'ಸಂಘರ್ಷ' ಆರಂಭವಾಗಿದೆ. ಉಭಯ ದೇಶಗಳೂ ಗಡಿಯಲ್ಲಿ ಬೃಹತ್ ಲೌಡ್‌ಸ್ಪೀಕರ್‌ಗಳನ್ನು ಅಳವಡಿಸಿ ಪರಸ್ಪರರ ವಿರುದ್ಧ ಪ್ರಚಾರ ಅಭಿಯಾನ ಆರಂಭಿಸಿವೆ. ಇದರೊಂದಿಗೆ ಶೀತಲ ಸಮರ ಕಾಲದ ನೆನಪು ಮರುಕಳಿಸುತ್ತಿದೆ.

ಇದಕ್ಕೂ ಮೊದಲು ದಕ್ಷಿಣ ಕೊರಿಯಾ ಕಾರ್ಯಕರ್ತರು ಬಲೂನುಗಳಲ್ಲಿ ಉತ್ತರ ಕೊರಿಯಾ ವಿರೋಧಿ ಸಂದೇಶಗಳನ್ನು ತುಂಬಿ ಆ ದೇಶದ ಕಡೆ ರವಾನಿಸಿದ್ದರು. ಇದಕ್ಕೆ ಪ್ರತಿಯಾಗಿ ಉತ್ತರ ಕೊರಿಯಾ ಸಾವಿರಕ್ಕೂ ಹೆಚ್ಚು ಬಲೂನುಗಳಲ್ಲಿ ಕಸ ಹಾಗೂ ತ್ಯಾಜ್ಯ ತುಂಬಿ ದಕ್ಷಿಣ ಕೊರಿಯಾ ಕಡೆ ಕಳಿಸಿತ್ತು.

ತನ್ನ ನಾಯಕ ಕಿಮ್ ಜಾಂಗ್ ಉನ್ ವಿರುದ್ಧ ಯಾವುದೇ ದೇಶ ಟೀಕಿಸುವುದನ್ನು ಉತ್ತರ ಕೊರಿಯಾ ತೀವ್ರವಾಗಿ ವಿರೋಧಿಸುತ್ತಿದೆ. ಹೀಗಾಗಿ ದಕ್ಷಿಣ ಕೊರಿಯಾ ಟೀಕೆಯ ಕರಪತ್ರಗಳನ್ನು ಬಲೂನುಗಳಲ್ಲಿ ಕಳಿಸಿರುವುದಕ್ಕೆ ಉತ್ತರ ಕೊರಿಯಾ ತೀವ್ರ ಆಕ್ರೋಶಗೊಂಡಿದೆ.

ಬಲೂನು ಘಟನೆಯ ನಂತರ ಉತ್ತರ ಕೊರಿಯಾದ ಗಡಿಗಳಲ್ಲಿ ಲೌಡ್‌ಸ್ಪೀಕರ್‌ಗಳನ್ನು ಅಳವಡಿಸಿ ತಿರುಗೇಟು ನೀಡಲಾಗಿತ್ತು. ನಂತರ ದಕ್ಷಿಣ ಕೊರಿಯಾ ಸಹ ಇದೇ ರೀತಿಯ ಕ್ರಮ ತೆಗೆದುಕೊಂಡು, ಉತ್ತರ ಕೊರಿಯಾ ಸರ್ಕಾರ ಟೀಕಿಸುವ ಸುದ್ದಿಗಳ ಪ್ರಸಾರ ಮಾಡುತ್ತಿದೆ. ಅಲ್ಲದೇ, ಅಬ್ಬರದಿಂದ ದಕ್ಷಿಣ ಕೊರಿಯಾದ ಪಾಪ್ ಸಂಗೀತವನ್ನೂ ಬಿತ್ತರಿಸುತ್ತಿದೆ.

ಇದಾದ ನಂತರ ಹೇಳಿಕೆ ನೀಡಿರುವ ಕಿಮ್ ಜಾಂಗ್ ಉನ್ ಸಹೋದರಿ ಕಿಮ್ ಯೊ ಜಾಂಗ್, ದಕ್ಷಿಣ ಕೊರಿಯಾ ಅಪಾಯ ಕಾರಿ ಪರಿಸ್ಥಿತಿ ಸೃಷ್ಟಿಸಿದೆ. ಬಲೂನುಗಳಲ್ಲಿ ಕರಪತ್ರ ಕಳಿಸುವ ಪ್ರವೃತ್ತಿ ಮುದುವರೆಸಿದರೆ ಹೊಸ ಪ್ರತಿಕ್ರಿಯೆ ನೀಡಲಾಗುವುದು. ಇದು ಸಂಘರ್ಷಕ್ಕೆ ಪ್ರಚೋದನೆಯಾಗಬಹುದು ಎಂದು ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ದಕ್ಷಿಣ ಕೊರಿಯಾದ ಸೈನಿಕ ಸಿಬ್ಬಂದಿ ಜಂಟಿ ಮುಖ್ಯಸ್ಥರ ವಕ್ತಾರ ಲೀ ಸುಂಗ್ ಜೂನ್, ಉತ್ತರ ಕೊರಿಯಾ ಯಾವ ಕ್ರಮ ತೆಗೆದುಕೊಳ್ಳಲಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಸಾಕಷ್ಟು ಭದ್ರತೆ ಇರುವ ಕಡೆಗಳಲ್ಲಿ ಲೌಡ್ ಸ್ಪೀಕರ್ ಅಳವಡಿಸಲಾಗಿದೆ. ದಾಳಿ ಎದುರಾದರೂ ಕ್ಷಿಪ್ರ ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ.

ಅವರು ಅಷ್ಟು ಸುಲಭವಾಗಿ ಪ್ರಚೋದನೆಗೆ ಗುರಿಯಾಗುತ್ತಾರೆ ಎಂದು ನಾವು ಭಾವಿಸುವುದಿಲ್ಲ ಎಂದೂ ಲೀ ಹೇಳಿದ್ದಾರೆ.

ಶೀತಲ ಸಮರದ ಕಾಲದಲ್ಲಿ ಲೌಡ್ ಸ್ಪೀಕರ್ 'ಸಂಘರ್ಷ' ನಡೆಯುತ್ತಿತ್ತು. ನಂತರ 2015ರಲ್ಲಿ ಮತ್ತೆ ಲೌಡ್ ಸ್ಪೀಕರ್ ಪ್ರಸಾರ ಆರಂಭಿಸಲಾಗಿತ್ತು. ಆ ಸಂದರ್ಭದಲ್ಲಿ ಉಭಯ ದೇಶಗಳು ಫಿರಂಗಿ ಚಕಮಕಿ ಸಹ ನಡೆಸಿದ್ದವು. 2018ರಲ್ಲಿ ಗಡಿಯಿಂದ ಲೌಡ್ ಸ್ಪೀಕರ್‌ಗಳನ್ನು ವಾಪಸ್ ಪಡೆಯಲಾಗಿತ್ತು.

ಈಗ ಮತ್ತೆ ಗಡಿಯಲ್ಲಿ ಲೌಡ್‌ಸ್ಪೀಕರ್ ಸದ್ದು ಜೋರಾಗಿದೆ. ಇದಕ್ಕೂ ಮುಂಚೆ ದಕ್ಷಿಣ ಕೊರಿಯಾದ ಕಾರ್ಯಕರ್ತರು ಬಲೂನುಗಳಲ್ಲಿ ಉತ್ತರ ಕೊರಿಯಾ ವಿರೋಧಿ ಕರಪತ್ರಗಳು ಹಾಗೂ ದಕ್ಷಿಣ ಕೊರಿಯಾದ ಜನಪ್ರಿಯ ಹಾಡುಗಳಿರುವ ಪೆನ್‌ಡ್ರೈವ್‌ಗಳನ್ನು ಬಲೂನುಗಳ ಮೂಲಕ ಗಡಿಯಾಚೆಗೆ ರವಾನಿಸಿದ್ದರು.

# ಹರಪನಹಳ್ಳಿ : ಬಿಜೆಪಿ ಕಾರ್ಯಕರ್ತರ ಸಂಭ್ರಮ



ಹರಪನಹಳ್ಳಿ,ಜೂ. 10- ತಾಲ್ಲೂಕಿನ ಅರಸೀಕೆರೆ ಹೋಬಳಿಯ ಉಚ್ಚಂಗಿದುರ್ಗ ಗ್ರಾಮದ ಪಾದಗಟ್ಟಿ ಹತ್ತಿರ ಮತ್ತು ಅರಸೀಕೆರೆ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಬಿಜೆಪಿ ಕಾರ್ಯಕರ್ತರು ಮತ್ತೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮೋದಿಯವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು.

ಸತತವಾಗಿ ಮೂರನೇ ಬಾರಿಗೆ ಪ್ರಧಾನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಕ್ಕೆ ನರೇಂದ್ರ ಮೋದಿಜಿಯವರಿಗೆ ಅಭಿನಂದನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಹಲವಾರು ಯುವಕರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದರು.

ಬಿಜೆಪಿ ಮುಖಂಡರಾದ ವೈ.ಡಿ.ಅಣ್ಣಪ್ಪ, ಪ್ರಶಾಂತ್ ಪಾಟೀಲ್, ಬೇವಿನಹಳ್ಳಿ ಕೆಂಚನಗೌಡ, ಎಸ್.ಹನುಮಂತಪ್ಪ, ಈರಣ್ಣ ಮಾಸ್ತರ್, ಉಚ್ಚಂಗೆಮ್ಮ ದೇವಸ್ಥಾನ ಕಮಿಟಿ ಅಧ್ಯಕ್ಷ ಕಟಿಗಿ ಪರುಸಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ಕೆಂಚಪ್ಪ, ಹಾಲೇಶ್, ಮುಖಂಡರಾದ ಮಹಾಭಲೇಶ್ವರ ಗೌಡ, ಫಣಿಯಾಪುರದ ಲಿಂಗರಾಜ್, ಹಡಪದ ಸಿದ್ದೇಶ್, ಯುವರಾಜ್, ವೀರೇಶ್, ಕೆಂಚ ಹನುಮಪ್ಪ, ಚಂದ್ರಪ್ಪ, ಕೆಂಚಜ್ಜ, ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.

# ಪುಟ್ಟರಾಜ ಸೇವಾ ಸಮಿತಿಯಿಂದ ಪರಿಸರ ದಿನ



ದಾವಣಗೆರೆ, ಜೂ.10- ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ, ವಚನಾಮೃತ ಬಳಗ, ಬೇತೂರು ಹಾಗೂ ದೊಗ್ಗಳ್ಳಿ ಬಡಾವಣೆ ಸದಸ್ಯರು ಭಾನುವಾರ ಬೇತೂರು ಬಡಾವಣೆಯ ಪಾರ್ಕ್‌ನಲ್ಲಿ ಗಿಡ ನೆಡುವ ಮೂಲಕ ವಚನಾಮೃತ ಬಳಗದ ವಾರ್ಷಿಕೋತ್ಸವ ಹಾಗೂ ವಿಶ್ವ ಪರಿಸರ ದಿನ ಆಚರಿಸಲಾಯಿತು. ಇದೇ ವೇಳೆ ಜಾನಪದ ಹಾಗೂ ಹಿರಿಯ ಸಾಹಿತಿ ದಿವಂಗತ ಡಾ.ಎಂ.ಜಿ ಈಶ್ವರಪ್ಪ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಸೌಮ್ಯಾ ಸತೀಶ್, ಮಮತಾ ನಾಗರಾಜ್, ಮತ್ತಿ ಮುರುಗೇಶ್, ಶಿವಕುಮಾರ್, ಅನಿಲ್ ಕುಮಾರ್, ಸತೀಶ್ ಕುಮಾರ್, ರಾಕೇಶ್, ನಿಜಲಿಂಗಪ್ಪ, ಶಾಂತಾ ಶಿವಶಂಕರ್, ಜ್ಯೋತಿ ಬೆಳಗಾವಿ, ಉಷಾ, ಸುಮಾ ಚಂದ್ರಶೇಖರ್, ರೇಖಾ ಬೇತೂರ್, ದೀಪಾ ಕಿರಣ್, ಲತಾ ಕಪಾಳಿ ಮತ್ತಿತರರಿದ್ದರು.

# ಲೋಕಸಭಾ ಸೋಲು : ಬಹಿರಂಗ ಹೇಳಿಕೆ ನೀಡದಂತೆ ಡಿಕೆಶಿ ಸೂಚನೆ

ಬೆಂಗಳೂರು, ಜೂ. 10 - ಲೋಕಸಭಾ ಚುನಾವಣೆ ಸೋಲಿನ ಬಗ್ಗೆ ಶಾಸಕರು ಬಹಿರಂಗ ಹೇಳಿಕೆ ನೀಡದಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಜನರು ತೀರ್ಪು ಕೊಟ್ಟಿದ್ದಾರೆ, ಅದನ್ನು ಸ್ವೀಕರಿಸಲೇಬೇಕು. ತೀರ್ಪಿನ ಮೇಲೆ ಸಾರ್ವಜನಿಕವಾಗಿ ಪರಾ ಮರ್ಶೆ ಮಾಡುವು ದರಿಂದ ಯಾವುದೇ ಲಾಭವಿಲ್ಲ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಕೆಲವು ಶಾಸಕರು ಮತ್ತು ಮುಖಂಡರು ಚುನಾವಣಾ ಫಲಿತಾಂಶದ ಬಗ್ಗೆ ಅನಗತ್ಯ ಹೇಳಿಕೆ ನೀಡಿ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿ ಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇನ್ನು ಮುಂದೆ ಈ ವಿಷ ಯವಾಗಿ ಯಾರೂ ಸಾರ್ವಜನಿ ಕವಾ ಗಿ ಮಾತನಾಡಬಾರ ದೆಂದು ಮನವಿ ಮಾಡಿಕೊಳ್ಳುತ್ತೇನೆ ಎಂದಿದ್ದಾರೆ.

ನಾವು ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳ ಪೈಕಿ 14 ರಿಂದ 15 ಸ್ಥಾನ ಗೆಲ್ಲುವ ನಿರೀಕ್ಷೆ ಇತ್ತು, ಆದರೆ ಕಾರಣಾಂತರ ಗಳಿಂದ ಇದು ಸಾಧ್ಯವಾಗಲಿಲ್ಲ, ಜನ ತೀರ್ಪು ನೀಡಿದ್ದಾರೆ. ಸೋಲಿನ ಬಗ್ಗೆ ವಿಮರ್ಶೆ ಮಾಡಿ ವರದಿ ನೀಡುವಂತೆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆದೇಶ ಮಾಡಿದ್ದಾರೆ ಎಂದು ಹೇಳಿದರು.

ಚುನಾವಣೆ ಹೊಣೆ ಹೊತ್ತವರಿಂದ ವರದಿ ಕೇಳುತ್ತೇವೆ, ಅದಕ್ಕಾಗಿ ಒಂದೆರಡು ದಿನದಲ್ಲೇ ಹಿರಿಯ ನಾಯಕರ ಸಭೆ ಕರೆಯಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾವು ಎಲ್ಲಿ ಪ್ರಚಂಡ ಜಯ ಗಳಿಸಿದ್ದೆವೋ, ಈ ಚುನಾವಣೆಯಲ್ಲಿ ಆ ಸ್ಥಳಗಳಲ್ಲೇ ಭಾರೀ ಸೋಲು ಕಂಡಿದ್ದೇವೆ. ಕ್ಷೇತ್ರದ ಚುನಾವಣಾ ಹೊಣೆಗಾರಿಕೆ ವಹಿಸಿಕೊಂಡವರು ಸೋಲಿನ ಕಾರಣಗಳನ್ನು ಕೊಡಬೇಕಿರುವುದು ಅವರ ಜವಾಬ್ದಾರಿ, ಕೊಡುತ್ತಾರೆ ಎಂದು ಶಿವಕುಮಾರ್ ಹೇಳಿದರು. ನಮಗೆ ವರದಿ ನೀಡುವ ಮೊದಲು ಕಾರ್ಯಕರ್ತರು, ಮುಖಂಡರು ಮತ್ತು ಸಾರ್ವಜನಿಕರ ಅಭಿಪ್ರಾಯ ಪಡೆದು ಎಲ್ಲಿ ಎಡವಿದ್ದೇವೆ ಎಂಬುದನ್ನು ತಿಳಿಸಬೇಕು ಎಂದರು.

ನನ್ನ ಕ್ಷೇತ್ರದ ಕೆಲವು ಮುಖಂಡರ ವ್ಯಾಪ್ತಿಯಲ್ಲೇ ಹಿನ್ನಡೆಯಾಗಿದೆ, ಈಗ ಅದರ ಬಗ್ಗೆ ದೂಷಿಸುತ್ತಾ ಕುಳಿತರೆ ಆಗದು. ಆಗಿರುವ ತಪ್ಪನ್ನು ತಿದ್ದಿಕೊಳ್ಳಬೇಕು, ಅದಕ್ಕಾಗಿಯೇ ವರಿಷ್ಠರು ವರದಿ ಕೇಳಿದ್ದಾರೆ ಎಂದೂ ಅವರು ಹೇಳಿದರು. ಮುಂದೆ ಜಿಲ್ಲಾ, ತಾಲ್ಲೂಕು ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗಲಿವೆ, ಈ ವೇಳೆಗೆ ನಮ್ಮ ತಪ್ಪನ್ನು ನಾವು ತಿದ್ದಿಕೊಳ್ಳಬೇಕು ಎಂದು ತಿಳಿಸಿದರು.

# ತೂಕವಿಲ್ಲದ ಬೊಮ್ಮಾಯಿ ಮಾತು : ಪಾಟೀಲ



ರಾಣೇಬೆನ್ನೂರು, ಜೂ.10- ಹುಬ್ಬಳ್ಳಿಯ ನೇಹಾ ಹಿರೇಮಠ ಮತ್ತು ಅಂಜಲಿ ಅಂಬಿಗೇರ ಕೊಲೆಗೆ ಸಂಬಂಧಿಸಿದಂತೆ ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಮಾಧ್ಯಮದವರೊಂದಿಗೆ ಮಾತನಾ ಡುತ್ತಾ, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿ ದಿದೆ ಮತ್ತು ಪೊಲೀಸರು ಅಸಮರ್ಥರಾಗಿ ದ್ದಾರೆ ಎಂದು ತೂಕವಿಲ್ಲದ ಮಾತುಗಳನ್ನಾಡಿ ದ್ದಾರೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಟೀಕಿಸಿದ್ದಾರೆ.

ಕೇವಲ ಒಂದು ವರ್ಷದ ಹಿಂದೆ ಮುಖ್ಯಮಂತ್ರಿಯಾಗಿ ಅದಕ್ಕೂ ಮೊದಲು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಇದೇ ಪೊಲೀಸರನ್ನು ದಕ್ಷರು, ಸಮರ್ಥರು ಎಂದು ಹೊಗಳುತ್ತಾ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದೆ ಎಂದು ಹೇಳುತ್ತಿದ್ದ ಬೊಮ್ಮಾಯಿಗೆ ಈಗ ಒಂದೇ ವರ್ಷದ ಅಂತರದಲ್ಲಿ ಅದೇ ಪೊಲೀಸರು ಹೇಗೆ ಅಸಮರ್ಥರಾದರು ? ಎಂದು ಪಾಟೀಲ ಪ್ರಶ್ನಿಸಿದ್ದಾರೆ.

ರಾಜಕಾರಣಿಗಳು ಸಾರ್ವಜನಿಕರನ್ನು, ಕಾರ್ಯಕರ್ತರನ್ನು ಯಾಮಾರಿ ಸುವುದು ಸರ್ವೇ ಸಾಮಾನ್ಯ. ಆದರೆ ತಪ್ಪು ಮಾಡಿದವರ ತಪ್ಪನ್ನು ಬಯಲಿಗೆಳೆದು ಸಾರ್ವಜನಿಕರ ಮುಂದೆ ಇಡುವ ಕೆಲಸ ಮಾಡುವ ಅತ್ಯಂತ ಸೂಕ್ಷ್ಮ ಮನಸ್ಸಿನ ಪತ್ರಕರ್ತರು ಭ್ರಷ್ಟರಿಗೆ, ಸುಳ್ಳು ಹೇಳುವವರಿಗೆ ಸಿಂಹ ಸ್ವಪ್ನವಾಗದೇ ಬಲಾಢ್ಯ ರಾಜಕಾರಣಿಗಳ ಕೈಗೊಂಬೆಯಾದರೆ ಸಾರ್ವಜನಿಕ ವಲಯದಲ್ಲಿ ಅಪಾರ ನಂಬಿಕೆ, ವಿಶ್ವಾಸಕ್ಕೆ ಪಾತ್ರವಾಗಿರುವ ಮಾಧ್ಯಮ ವಿಶ್ವಾಸ ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

# ಫ್ರಾನ್ಸ್, ಜರ್ಮನಿಯ ಆಡಳಿತಾರೂಢರಿಗೆ ಹಿನ್ನಡೆ

ಬ್ರುಸೆಲ್ಸ್, ಜೂ. 10 – ಯುರೋಪ್ ಒಕ್ಕೂಟಕ್ಕೆ ನಡೆದ ಚುನಾವಣೆಯಲ್ಲಿ ಬಲಪಂಥೀಯರು ಪ್ರಾಬಲ್ಯ ಪಡೆದುಕೊಂಡಿದ್ದಾರೆ. ಇದರಿಂದ ಹಲವು ದೇಶಗಳಲ್ಲಿ ರಾಜಕೀಯ ಭೂಕಂಪ ಉಂಟಾಗಿದೆ. ಈ ಫಲಿತಾಂಶದಿಂದ ಫ್ರಾನ್ಸ್ ಹಾಗೂ ಜರ್ಮನಿಯ ಆಡಳಿತಾರೂಢ ಪಕ್ಷಗಳಿಗೂ ಹಿನ್ನಡೆಯಾಗಿದೆ. ಮುಂದಿನ ಐದು ವರ್ಷಗಳಲ್ಲಿ ಯುರೋಪ್ ಸಂಸತ್ತು ಯಾವುದೇ ಕ್ರಮ ತೆಗೆದುಕೊಳ್ಳುವುದು ಕಠಿಣವಾಗಲಿದೆ.

ಚುನಾವಣೆಯಲ್ಲಿ ಫ್ರಾನ್ಸ್‌ನ ಮರೀನ್ ಲೆ ಪೆನ್ ಅವರ ನ್ಯಾಷನಲ್ ರ‍್ಯಾಲಿ ಪಕ್ಷ ಜಯ ಸಾಧಿಸಿದೆ. ಈ ಬೆಳವಣಿಗೆ ನಂತರ ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮೆಕ್ರಾನ್ ಅವರು ರಾಷ್ಟ್ರೀಯ ಚುನಾವಣೆಗೆ ಆದೇಶಿಸಿದ್ದಾರೆ.

ಜರ್ಮನಿಯಲ್ಲಿ ತೀವ್ರ ಬಲಪಂಥೀಯರು ಭಾರೀ ಮುನ್ನಡೆ ಗಳಿಸಿದ್ದಾರೆ. ಇದು ಜರ್ಮನಿಯ ಚಾನ್ಸಲರ್ ಒಲಾಫ್ ಸ್ಕಾಲ್ಜ್ ಅವರ ಸೋಷಿಯಲ್ ಡೆಮಾಕ್ರಾಟ್ಸ್ ಪಕ್ಷಕ್ಕೆ ಮುಖಭಂಗ ತಂದಿದೆ. ಇದರಿಂದ ಸರ್ಕಾರದಲ್ಲಿ ಆಂತರಿಕ ಸಂಘರ್ಷ ಹೆಚ್ಚಾಗುವ ಸಾಧ್ಯತೆ ಇದೆ. 2025ರಲ್ಲಿ ಜರ್ಮನಿಯಲ್ಲಿ ಚುನಾವಣೆಗಳು ನಡೆಯಲಿವೆ. ಇಟಲಿಯಲ್ಲಿ ಪ್ರಧಾನ ಮಂತ್ರಿ ಜಾರ್ಜಿಯಾ ಮೆಲೊನಿ ಅವರ ಪಕ್ಷ ಶೇ.28ಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದೆ. ಇದರಿಂದಾಗಿ ಮುಂದಿನ ಒಕ್ಕೂಟಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸಲಿದ್ದಾರೆ.

ಯುರೋಪಿನಾದ್ಯಂತ ಗ್ರೀನ್ ಹಾಗೂ ಉದ್ಯಮ ಪರ ಲಿಬರಲ್ ಗುಂಪುಗಳು ಹಿನ್ನಡೆ ಕಂಡಿವೆ. 27 ದೇಶಗಳ ಯುರೋಪ್ ಒಕ್ಕೂಟದಲ್ಲಿ ಈಗ ಬಲಪಂಥೀಯ ಯುರೋಪಿಯನ್ ಪೀಪಲ್ಸ್ ಪಾರ್ಟಿ ಅತಿ ದೊಡ್ಡ ಬಣವಾಗಿದೆ.

**ಫ್ರಾನ್ಸ್‌ನಲ್ಲಿ ರಾಜಕೀಯ ಭೂಕಂಪ :**

ವಲಸೆ ವಿರೋಧಿಸುವ ಲೆ ಪೆನ್ ಅವರ ನ್ಯಾಷನಲ್ ರ‍್ಯಾಲಿ ಪಕ್ಷ ಶೇ.31-32ರಷ್ಟು ಮತ ಪಡೆದಿದೆ. ಅವರ ಪಕ್ಷ ಮುನ್ನಡೆ ಗಳಿಸುವ ಅಂದಾಜಿತ್ತು. ಆದರೆ, ಮೆಕ್ರಾನ್ ಅವರ ರಿನೈಸಾನ್ಸ್ ಪಾರ್ಟಿಗಿಂತ ಎರಡು ಪಟ್ಟು ಮತ ಗಳಿಸುವ ನಿರೀಕ್ಷೆ ಇರಲಿಲ್ಲ.

ಫಲಿತಾಂಶದ ನಂತರ ಮೆಕ್ರಾನ್ ಅವರು ಫ್ರಾನ್ಸ್ ಚುನಾವಣೆಗೆ ಆದೇಶ ಹೊರಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಮೆಕ್ರಾನ್ ಅವರು ಬಲಪಂಥೀಯ ಸರ್ಕಾರದ ಜೊತೆ ಕೆಲಸ ಮಾಡುವ ಪರಿಸ್ಥಿತಿ ಬರಲಿದೆ.

**ಹಗರಣವಾದರೂ ಬಲಕ್ಕೆ ಬಾಧೆಯಿಲ್ಲ :**

ಜರ್ಮನಿಯಲ್ಲಿ ಒಲಾಫ್ ಸ್ಕಾಲ್ಜ್ ಅವರ ಸೋಷಿಯಲ್ ಡೆಮಾಕ್ರಾಟ್ಸ್ ಪಕ್ಷ ಎರಡನೇ ವಿಶ್ವ ಸಮರದ ನಂತರ ಅತ್ಯಂತ ಹೀನಾಯ ಹಿನ್ನಡೆ ಕಂಡಿದೆ. ಅದರ ಮತ ಗಳಿಕೆ ಶೇ.13.9ಕ್ಕೆ ಕುಸಿದಿದೆ.

ಬಲಪಂಥೀಯವಾದ ಆಲ್ಟರ್ನೇಟಿವ್ ಫಾರ್ ಜರ್ಮನಿ ಶೇ.15.9ರಷ್ಟು ಮತ ಗಳಿಸಿದೆ. ಯುರೋಪ್ ಒಕ್ಕೂಟದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅದರ ಇಬ್ಬರು ಅಭ್ಯರ್ಥಿಗಳು ವಿವಾದಗಳಲ್ಲಿ ಸಿಲುಕಿದ್ದರು. ಆದರೂ, ಮತ ಗಳಿಕೆ ಕಳೆದ ಬಾರಿಗಿಂತ ಹೆಚ್ಚಾಗಿದೆ. ಜರ್ಮನಿಯ ವಿರೋಧ ಪಕ್ಷವಾದ ಬಲಪಂಥೀಯ ಯೂನಿಯನ್ ಬ್ಲಾಕ್ ಶೇ.30ರ ಮತ ಪಡೆದಿದೆ.

**ಬಲಪಂಥೀಯರಿಗೆ 191 ಸ್ಥಾನ :**

ಯುರೋಪ್ ಒಕ್ಕೂಟದ ಸಂಸತ್ತು 720 ಸ್ಥಾನಗಳನ್ನು ಹೊಂದಿದೆ. ಮಧ್ಯ ಬಲಪಂಥೀಯರಾದ ಯುರೋಪಿಯನ್ ಪೀಪಲ್ಸ್ ಪಾರ್ಟಿಯು 191 ಸ್ಥಾನ ಪಡೆಯುವ ನಿರೀಕ್ಷೆ ಇದೆ. ಇದು ಅತಿ ದೊಡ್ಡ ಬಣವಾಗಿ ಹೊರ ಹೊಮ್ಮಲಿದೆ. ಮಧ್ಯ ಎಡಪಂಥೀಯ ಸೋಷಿಯಲಿಸ್ಟ್ ಅಂಡ್ ಡೆಮಾಕ್ರಾಟ್‌ಗಳು 135 ಸೀಟುಗಳಿಗೆ ಕುಸಿದಿದ್ದಾರೆ.

ಪರಿಸರವಾದಿಗಳಾದ ಗ್ರೀನ್‌ಗಳಿಗೆ ಅತಿ ದೊಡ್ಡ ಹಿನ್ನಡೆಯಾಗಿದೆ. ಅವರು 20 ಸ್ಥಾನ ಕಳೆದುಕೊಂಡಿದ್ದಾರೆ. ಈ ಬಾರಿ ಗ್ರೀನ್ ಗಳಿಸುವ ಮತಗಳ ಪ್ರಮಾಣ ಶೇ.12ಕ್ಕೆ ಕುಸಿಯಲಿದೆ ಎಂದು ಅಂದಾಜಿಸಲಾಗಿದೆ. ಗ್ರೀನ್ಸ್ ಕೂಟದ ಸ್ಥಾನಗಳ ಸಂಖ್ಯೆ 53ಕ್ಕೆ ಸೀಮಿತವಾಗುವ ಸಾಧ್ಯತೆ ಇದೆ.

ಈ ಫಲಿತಾಶದ ಕಾರಣದಿಂದಾಗಿ ಯುರೋಪ್ ಒಕ್ಕೂಟದಲ್ಲಿ ಶಾಸನ ರೂಪಿಸು ವುದು ನಿಧಾನವಾಗಲಿದೆ. ಪರಿಸರ ಬದಲಾವಣೆ ಯಿಂದ ಹಿಡಿದು ಕೃಷಿ ಸಬ್ಸಿಡಿಗಳವರೆಗೆ ಹಲವು ನಿರ್ಧಾರಗಳು ಕಠಿಣವಾಗಲಿವೆ. ಜೂನ್ 17ರಂದು ಯುರೋಪ್ ಒಕ್ಕೂಟದ ಅಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳು ಸಭೆ ನಡೆಸಿ ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಿದ್ದಾರೆ.

# ಉನ್ನತ ಹುದ್ದೆಗಳಲ್ಲಿ ಯಥಾಸ್ಥಿತಿ

(1ನೇ ಪುಟದಿಂದ) ಜೊತೆಗೆ, ಮಾಹಿತಿ ಮತ್ತು ಪ್ರಸಾರ ಸಚಿವಾಲಯವನ್ನೂ ಪಡೆದಿದ್ದಾರೆ.

ಧರ್ಮೇಂದ್ರ ಪ್ರಧಾನ್ ಅವರು ಶಿಕ್ಷಣ ಹಾಗೂ ಪಿಯೂಶ್ ಗೋಯಲ್ ಅವರು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಗಳಲ್ಲಿ ಮುಂದುವರೆದಿದ್ದಾರೆ. ಹರ್‌ದೀಪ್ ಸಿಂಗ್ ಪುರಿ ಅವರು ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯದಲ್ಲಿ ಮುಂದುವರೆದಿದ್ದಾರೆ. ಆದರೆ, ವಸತಿ ಮತ್ತು ನಗರ ವ್ಯವಹಾರಗಳ ಖಾತೆ ಕಳೆದುಕೊಂಡಿದ್ದಾರೆ.

ಆಡಳಿತದಲ್ಲಿ ಮಹತ್ವ ಪಡೆದಿರುವ ಬಹುತೇಕ ಸಚಿವಾಲಯಗಳನ್ನು ಬಿಜೆಪಿ ಉಳಿಸಿಕೊಂಡಿದೆ. ಮಿತ್ರ ಪಕ್ಷವಾದ ಟಿ.ಡಿ.ಪಿ. ಹಾಗೂ ಜೆಡಿಯುಗಳಿಗೆ ನಾಗರಿಕ ವಿಮಾನಯಾನ, ಪಂಚಾಯತ್ ರಾಜ್, ಮೀನುಗಾರಿಕೆ, ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯಗಳನ್ನು ನೀಡಲಾಗಿದೆ.

ಕಿರಣ್ ರಿಜಿಜು ಅವರನ್ನು ಭೂ ವಿಜ್ಞಾನಗಳ ಸಚಿವಾಲಯದಿಂದ ಸಂಸದೀಯ ವ್ಯವಹಾರಗಳ ಸಚಿವಾಲಯಕ್ಕೆ ವರ್ಗಾಯಿಸಲಾಗಿದೆ. ಅರ್ಜುನ್ ರಾಮ್ ಮೇಘ್ವಾಲ್ ಅವರು ಕಾನೂನು ಹಾಗೂ ಸರ್ಬಾನಂದ ಸೊನಾವಲ್ ಅವರು ಬಂದರು ಸಚಿವಾಲಯದಲ್ಲಿ ಮುಂದುವರೆದಿದ್ದಾರೆ. ಭೂಪೇಂದ್ರ ಯಾದವ್ ಅವರು ಪರಿಸರ ಖಾತೆ ಉಳಿಸಿಕೊಂಡಿದ್ದಾರೆ.

ಜೆಡಿಎಸ್‌ನ ಹೆಚ್.ಡಿ. ಕುಮಾರಸ್ವಾಮಿ ಅವರು ಭಾರೀ ಕೈಗಾರಿಕೆ ಹಾಗೂ ಉಕ್ಕು ಸಚಿವಾಲಯ ಪಡೆದಿದ್ದಾರೆ. ಹೆಚ್.ಎ.ಎಂ.ನ ಜಿತನ್ ರಾಮ್ ಮಾಂಝಿ ಅವರು ಸಣ್ಣ ಕೈಗಾರಿಕಾ ಸಚಿವಾಲಯ, ಜೆಡಿಯುನ ಲಲನ್ ಸಿಂಗ್ ಅವರು ಪಂಚಾಯತ್ ರಾಜ್, ಮೀನುಗಾರಿಕೆ, ಪಶುಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯ ಪಡೆದಿದ್ದಾರೆ.

ಟಿ.ಡಿ.ಪಿ.ಯ ಕೆ. ರಾಮಮನೋಹನ್ ನಾಯ್ಡು ಅವರು ನಾಗರಿಕ ವಿಮಾನಯಾನ ಸಚಿವಾಲಯ, ಎಲ್.ಜೆ.ಪಿ. (ರಾಮ್ ವಿಲಾಸ್)ಯ ಚಿರಾಗ್ ಪಾಸ್ವಾನ್ ಅವರು ಆಹಾರ ಸಂಸ್ಕರಣೆ ಮತ್ತು ಕೈಗಾರಿಕಾ ಸಚಿವಾಲಯ ಪಡೆದಿದ್ದಾರೆ.

ಈ ಹಿಂದೆ ಕಲ್ಲಿದ್ದಲು ಹಾಗೂ ಗಣಿ ಸಚಿವಾಲಯ, ಸಂಸದೀಯ ವ್ಯವಹಾರಗಳ ಸಚಿವಾಲಯ ಹೊಂದಿದ್ದ ಪ್ರಹ್ಲಾದ್ ಜೋಷಿ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ನವೀಕರಣ ಇಂಧನ ಸಚಿವಾಲಯ ನೀಡಲಾಗಿದೆ. ಜಿ. ಕಿಶನ್ ರೆಡ್ಡಿ ಅವರಿಗೆ ಕಲ್ಲಿದ್ದಲು ಮತ್ತು ಗಣಿ ಸಚಿವಾಲಯ ನೀಡಲಾಗಿದೆ.

ಗಿರಿರಾಜ್ ಸಿಂಗ್ ಅವರನ್ನು ಗ್ರಾಮೀಣಾಭಿವೃದ್ಧಿಯಿಂದ ಜವಳಿ ಸಚಿವಾಲಯಕ್ಕೆ ವರ್ಗಾಯಿಸಲಾಗಿದೆ. ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ನಾಗರಿಕ ವಿಮಾನಯಾನದಿಂದ ಸಂಪರ್ಕ ಹಾಗೂ ಈಶಾನ್ಯ ಅಭಿವೃಡದ್ಧಿ ಸಚಿವಾಲಯಕ್ಕೆ ವರ್ಗಾಯಿಸಲಾಗಿದೆ. ಅನ್ನಪೂರ್ಣ ದೇವಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯಾಗಿದ್ದಾರೆ.

ಆರ್.ಎಲ್.ಡಿ.ಯ ಜಯಂತ್ ಚೌಧರಿ ಅವರಿಗೆ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತಾ ಸಚಿವಾಲಯ, ಶಿವಸೇನೆಯ ಜಾಧವ್ ಪ್ರತಾಪ್ ರಾವ್ ಗಣಪತ್ ರಾವ್ ಅವರಿಗೆ ಆಯುಷ್ ಸಚಿವಾಲಯ ಖಾತೆ ನೀಡಲಾಗಿದೆ.

# ಕುಂದುವಾಡದಲ್ಲಿ ಪ್ರೀಮಿಯರ್ ಲೀಗ್ -6



ದಾವಣಗೆರೆ, ಜೂ. 10 - ನಗರದ ಹಳೇ ಕುಂದುವಾಡದಲ್ಲಿ ಮನಾ ಯುವ ಬ್ರಿಗೇಡ್ ಹಾಗೂ ಜನತಾ ರಕ್ಷಣಾ ವೇದಿಕೆಯಿಂದ ಚಿಲ್ಡ್ರನ್ ಕುಂದುವಾಡ ಪ್ರೀಮಿಯರ್ ನಡೆದಿದ್ದು, ಈ ಪಂದ್ಯಾವಳಿಯಲ್ಲಿ ಡಿ ರಾಕ್ಸ್ ತಂಡ ರೋಚಕವಾಗಿ ಒಂದು ರನ್ ನಿಂದ ಗೆದ್ದು ಬೀಗಿದೆ.

ಪ್ರತಿ ವರ್ಷದಂತೆ ಈ ವರ್ಷವು ಕುಂದುವಾಡ ಪ್ರೀಮಿಯರ್ ಲೀಗ್ -6 ಆಯೋಜನೆ ಮಾಡಲಾಗಿತ್ತು, ಈ ಭಾರೀ ವಿಶೇಷವಾಗಿ ಗೋಲ್ಡನ್ ಕೆಪಿಎಲ್ (ಬಂಗಾರದ ಕಪ್) ನ್ನು ಇಡಲಾಗಿತ್ತು, ಮಳೆ ನಿರಂತರ ಆಗಮಿಸಿದ ಹಿನ್ನಲೆ ಗೋಲ್ಡನ್ ಕಪ್ ಮುಂದೂಡಲಾಯಿತು.

ಈ ಮಧ್ಯೆ ಮಳೆ ಬಿಡುವು ನೀಡಿದ ಹಿನ್ನೆಲೆ ಭಾನುವಾರ ಚಿಲ್ಡ್ರನ್ ಕೆಪಿಎಲ್ ಪಂದ್ಯ ನಡೆಸಲಾಯಿತು, ಐದನೇ ತರಗತಿಯಿಂದ 8ನೇ ತರಗತಿ ಒಳಗಿನ ಮಕ್ಕಳು ಮಾತ್ರ ಈ ಟೂರ್ನಿಯಲ್ಲಿ ಭಾಗವಹಿಸಿದ್ದು, ನಾಲ್ಕು ತಂಡಗಳನ್ನ ರಚಿಸಲಾಗಿತ್ತು, ಡೆವಿಲ್ಸ್ ಕ್ರಿಕೇಟರ್ಸ್, ಡಿ ರಾಕ್ಸ್, ಶ್ರೀ ವಿನಾಯಕ ಕ್ರಿಕೆಟರ್ಸ್, ಜೂನಿಯರ್ಸ್ ಸ್ನೇಹ ಬಳಗ ತಂಡಗಳು ಭಾಗವಹಿಸಿದ್ದವು.

ಗ್ರಾಮದ ಮುಖಂಡರು ಪಂದ್ಯಾವಳಿ ಉದ್ಘಾಟಿಸಿದರು. ಡೆವಿಲ್ಸ್ ಹಾಗೂ ಡಿ ರಾಕ್ಸ್ ತಂಡ ಫೈನಲ್ ಪ್ರವೇಶ ಪಡೆದಿದ್ದವು, ಮೊದಲ ಬ್ಯಾಟ್ ಮಾಡಿದ ಸಂಜಯ್ ಲೋಕಿಕೆರೆ ನಾಯಕತ್ವದ ಡಿ ರಾಕ್ಸ್ ತಂಡ ನಿಗಧಿತ 4 ಓವರ್ ಗಳಲ್ಲಿ 28 ರನ್ ಗಳಿಸಿತು, ಗುರಿ ಬೆನ್ನಟ್ಟಿದ ಗೌಡ್ರು ಪುನೀತ್ ನಾಯಕತ್ವ ಡೆವಿಲ್ಸ್ ತಂಡ ರೋಚಕ ಹಣಾಹಣಿಯಲ್ಲಿ ಕೇವಲ 1 ರನ್ ನಿಂದ ಸೋತು ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಡೆಯಬೇಕಾಯಿತು, ಕೊನೆಯ ಎಸೆತದಲ್ಲಿ ಗೆಲ್ಲಲು ಮೂರು ರನ್ ಗಳ ಅವಶ್ಯಕತೆ ಇತ್ತು, ಕೊನೆಯ ಎಸೆತ ಬಿಗಿ ಬೌಲಿಂಗ್ ದಾಳಿ ನಡೆಸಿದ ಬೌಲರ್ ಕೇವಲ ಒಂದು ರನ್ ಬಿಟ್ಟುಕೊಟ್ಟರು ಇದರೊಂದಿಗೆ ಕೇವಲ ಒಂದು ರನ್ ನಿಂದ ಡಿ ರಾಕ್ಸ್ ತಂಡ ವಿಜಯಶಾಲಿಯಾಯಿತು.

ಇನ್ನೂ ಮೂರನೇ ಸ್ಥಾನಕ್ಕಾಗಿ ಶ್ರೀ ವಿನಾಯಕ ಕ್ರಿಕೇಟರ್ಸ್ ಹಾಗೂ ಜೂನಿಯರ್ಸ್ ಸ್ನೇಹಬಳಗ ತಂಡ ಸೆಣಸಾಟ ನಡೆಸಿದವು.

ಈ ಪಂದ್ಯದಲ್ಲಿ ಶ್ರೀ ವಿನಾಯಕ ತಂಡ ಸುಲಭವಾಗಿ ಗೆಲುವು ಪಡೆವುದರೊಂದಿಗೆ 3ನೇ ಬಹುಮಾನ ಪಡೆಯಿತು.


ಜೂನಿಯರ್ಸ್ ಸ್ನೇಹ ಬಳಗ ನಾಲ್ಕನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಇನ್ನೂ ಎಲ್ಲಾ ಪಂದ್ಯಗಳು ರೋಚಕವಾಗಿದ್ದವು.

ಮಕ್ಕಳಿಗಷ್ಟೆ ಈ ಪಂದ್ಯಾವಳಿಯಲ್ಲಿ ಅವಕಾಶ ಇದ್ದಿದ್ದರಿಂದ ಆಟಕ್ಕೆ ಎಲ್ಲರಿಗೂ ಅವಕಾಶ ಸಿಕ್ಕಿತ್ತು, ಅಷ್ಟೆ ಉತ್ಸಾಹಕರಾಗಿ ಮಕ್ಕಳು ಪಾಲ್ಗೊಂಡಿದ್ದು ಚಿಲ್ಡ್ರನ್ ಕೆಪಿಎಲ್ ಯಶಸ್ವಿಯಾಗಿ ಮುಗಿದಿದೆ, ಇನ್ನೂ ಗೋಲ್ಡನ್ ಕೆಪಿಎಲ್ ಟೂರ್ನಿಯನ್ನೂ ಮುಂದೂಡಲಾಗಿದ್ದು, ಮುಂದಿನ ದಿನಾಂಕ ತಿಳಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

# ಚುನಾವಣಾ ಪ್ರಚಾರವೂ... ನರಮಂಡಲ ಶಾಸ್ತ್ರವೂ...

## ಜನರ ರಾಜಕೀಯ ನಿಲುವಿನ ಹೊಯ್ದಾಟದ ಬಗ್ಗೆ ಮೆದುಳಿನ ಒಳಗೆ ಇಣುಕು ನೋಟ

ಕವೆಂಟ್ರಿ (ಬ್ರಿಟನ್), ಜೂ. 10 - ಇತ್ತೀಚಿನ ವರ್ಷಗಳಲ್ಲಿ ಬ್ರಿಟಿಷ್ ಮತದಾರರ ಮನೋಭಾವ ಹೆಚ್ಚು ಡೋಲಾಯಮಾನವಾಗುತ್ತಿದೆ. 2015 ಹಾಗೂ 2017ರ ಚುನಾವಣೆಗಳಲ್ಲಿ ಅತಿ ಹೆಚ್ಚಿನ ಮತದಾರರು ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಜಿಗಿದಿದ್ದರು. ಇದೊಂದು ಆಧುನಿಕ ಕಾಲದ ದಾಖಲೆ ಎಂದೂ ಹೇಳಲಾಗುತ್ತಿದೆ.



ಬ್ರಿಟನ್‌ನಲ್ಲಿ ಮುಂಬರುವ ಚುನಾವಣೆಯಲ್ಲೂ ಇದೇ ಪ್ರವೃತ್ತಿ ಕಂಡು ಬರಲಿದೆ ಎಂದು ಅಂದಾಜಿಸಲಾಗುತ್ತಿದೆ. ಜನರ ಮನಸ್ಸಿನಲ್ಲಿ ಏನಾಗುತ್ತಿದೆ ಎಂಬುದನ್ನು ಅಂದಾಜಿಸಿದರೆ, ರಾಜಕೀಯ ಪರಿಸ್ಥಿತಿಗಳು ಸ್ಪಷ್ಟವಾಗಲಿವೆ. ಇದರಿಂದ ಪಕ್ಷಗಳು ಉತ್ತಮ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಲಿದೆ.

ಡ್ಯಾನಿಶ್ ವಿದ್ವಾಂಸ ಮೊಗೆನ್ಸ್ ಎನ್. ಪೆಡೆರ್ಸನ್ ಅವರು ಈ ರೀತಿಯ ಡೋಲಾಯಮಾನದ ಬಗ್ಗೆ ವಿವರವಾದ ವರದಿ ರೂಪಿಸಿದ್ದರು. ಇದರಿಂದಾಗಿ ರಾಜಕೀಯ ಹೊಯ್ದಾಟವನ್ನು ಪೆಡೆರ್ಸನ್ ವೊಲ್ಯಾಟಲಿಟಿ ಎಂದೂ ಹೇಳಲಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ವೈಯಕ್ತಿಕ ಮತದಾರರ ನಿಲುವು ಬದಲಿಸುವುದರಿಂದ ರಾಜಕೀಯ ವ್ಯವಸ್ಥೆಯ ಮೇಲೆ ಆಗುವ ಪರಿಣಾಮಗಳನ್ನು ಗಣಿತ ಸೂತ್ರಗಳ ಮೂಲಕ ಗುರುತಿಸುವ ಪ್ರಯತ್ನಗಳೂ ನಡೆದಿವೆ.

ಸರಳ ಭಾಷೆಯಲ್ಲಿ ಹೇಳುವುದಾದರೆ, ಚುನಾವಣೆಯೊಂದರಲ್ಲಿ ಎಷ್ಟು ಜನ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ವಾಲಿದರು ಎಂಬುದನ್ನು ಶೇಕಡಾವಾರು ಲೆಕ್ಕದಲ್ಲಿ ಗುರುತಿಸಬಹುದು. 1960ರ ವೇಳೆ ಬ್ರಿಟನ್‌ನಲ್ಲಿ ಪೆಡೆರ್ಸನ್ ಸೂಚ್ಯಂಕ ಶೇ.10ರಷ್ಟಿತ್ತು. ಅದೀಗ ಶೇ.40ರ ಹಂತಕ್ಕೆ ತಲುಪಿದೆ.

ಸಾಮಾಜಿಕ ಮಾಧ್ಯಮಗಳು ವ್ಯಾಪಕವಾಗಿರುವುದು ಹಾಗೂ ಅವುಗಳು ಚುನಾವಣೆ ಮೇಲೆ ಬೀರುವ ಪರಿಣಾಮದಿಂದ ಜನರ ಹೊಯ್ದಾಟ ಹೆಚ್ಚಾಗುತ್ತಿದೆ ಎಂಬುದು ಸಾಮಾನ್ಯ ಭಾವನೆ.

**ರಾಜಕೀಯದ ಮೇಲೆ ನರಮಂಡಲದ ಬೆಳಕು**

ಚುನಾವಣಾ ವೇಳೆ ಜನರ ಯೋಚನಾ ವಿಧಾನವನ್ನು ತಿಳಿಯಲು ಸಾಮಾಜಿಕ ನರಮಂಡಲ ವಿಜ್ಞಾನ ನೆರವಾಗಲಿದೆಯೇ ಎಂಬ ಕಡೆ ಚಿಂತನೆಗಳು ನಡೆದಿವೆ.

ರಾಜಕೀಯದ ಬಗ್ಗೆ ಚಿಂತಿಸುವಾಗ ನಮ್ಮ ಮೆದುಳಿನ ಯಾವ ಭಾಗ ಸಕ್ರಿಯವಾಗಿರುತ್ತದೆ ಎಂಬುದನ್ನು ಕಳೆದ ದಶಕದಲ್ಲಿ ನರಮಂಡಲ ವಿಜ್ಞಾನದಿಂದ ಪತ್ತೆ ಮಾಡಲಾಗಿದೆ. ಬಹುತೇಕರು ಭಯ ಹಾಗೂ ಭಾವನೆಗಳ ಕಾರಣದಿಂದ ನಿರ್ಧಾರ ತೆಗೆದುಕೊಳ್ಳುತ್ತಾರೆಯೇ ಹೊರತು, ತಾರ್ಕಿಕ ಚಿಂತನೆಯಿಂದಲ್ಲ ಎಂದೂ ಅಧ್ಯಯನ ತಿಳಿಸುತ್ತದೆ.

ಹೀಗಾಗಿ ಮತದಾರರು ಸಕಾರಾತ್ಮಕ ಸಂದೇಶಗಳಿಗಿಂತ ಒತ್ತಡದ ಸಂದೇಶಗಳಿಗೆ ಹೆಚ್ಚು ಪ್ರಭಾವಿತರಾಗುತ್ತಿದ್ದಾರೆ. ನಕಾರಾತ್ಮಕ ಚಿತ್ರಗಳು ಹಾಗೂ ಹೇಳಿಕೆಗಳಿಂದಾಗಿ ಮೆದುಳಿನ ಡೊರ್ಸೊಲ್ಯಾಟರಲ್ ಪ್ರಿಫ್ರಂಟಲ್ ಕಾರ್ಟೆಕ್ಸ್ ಭಾಗ ಹೆಚ್ಚು ಸಕ್ರಿಯವಾಗುತ್ತದೆ. ಈ ಭಾಗ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಆಹಾರ ಉತ್ಪನ್ನಗಳಿಗೆ ಹೋಲಿಸಿದರೆ, ಪಕ್ಷಗಳ ವಿಷಯಗಳ ವಿರುದ್ಧದ ವರದಿಗಳು ಬಂದಾಗ ಮೆದುಳಿನಲ್ಲಿ ಆಗುವ ಪರಿಣಾಮ ಮೂರು ಪಟ್ಟು ಹೆಚ್ಚಾಗಿದೆ. ಹೀಗಾಗಿ ರಾಜಕಾರಣದಿಂದ ಜನರ ಮೇಲೆ ಹೆಚ್ಚು ಪರಿಣಾಮವಾಗುತ್ತದೆ. ಮೆದುಳಿನ ಎಂ.ಆರ್.ಐ. ಸ್ಕ್ಯಾನ್‌ಗಳೂ ಈ ವಿಷಯದಲ್ಲಿ ಸಾಕ್ಷಿ ಒದಗಿಸಿವೆ.

ನಮ್ಮ ಪೂರ್ವಜರ ಕಾಲದಿಂದಲೂ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಹೆದರಿಕೆ ಪ್ರಮುಖ ಪರಿಣಾಮ ಬೀರುತ್ತಾ ಬಂದಿದೆ. ಅಪಾಯಗಳಿಂದ ಜೀವನಕ್ಕೆ ತೊಂದರೆಯಾಗುತ್ತದೆ. ಹೀಗಾಗಿ ಅಪಾಯಗಳ ಬಗ್ಗೆ ಜನರು ಹೆದರುವುದು ಸಹಜವೇ ಆಗಿದೆ.

ನಮ್ಮ ಹೆದರಿಕೆ ಹಾಗೂ ಕೋಪದ ಜೊತೆ ಆಟ ಆಡುತ್ತಾ, ಜನರನ್ನು ವಿಭಜಿಸುವ ರಾಜಕೀಯ ಘೋಷಣೆಗಳು ಚುನಾವಣೆಯ ಮೇಲೆ ಪರಿಣಾಮ ಬೀರುವುದನ್ನು ಹಿಂದಿನಿಂದಲೂ ಗಮನಿಸುತ್ತಾ ಬಂದಿದ್ದೇವೆ. ವಿಭಜನಾತ್ಮಕ ರಾಜಕೀಯ ಮೆದುಳಿನ ಆಂಟಿರಿಯರ್ ಸಿಂಗ್ಯುಲೇಟ್ ಕಾರ್ಟೆಕ್ಸ್ (ಎ.ಸಿ.ಸಿ.) ಭಾಗದಲ್ಲೂ ಪ್ರಭಾವ ಬೀರುತ್ತವೆ.

**ವೃದ್ಧರ ನಿಲುವು ಭಿನ್ನ**

ವೃದ್ಧರು ಮತದಾನ ಮಾಡುವ ವಿಷಯದಲ್ಲೂ ನರಮಂಡಲ ಶಾಸ್ತ್ರ ಆಸಕ್ತಿಕರ ಬೆಳಕು ಚೆಲ್ಲಿದೆ. ವೃದ್ಧರ ಮೆದುಳಿನಲ್ಲಿ ಡೊರ್ಸೊಲ್ಯಾಟರಲ್ ಪ್ರಿಫ್ರಂಟಲ್ ಕಾರ್ಟೆಕ್ಸ್ ಭಾಗ ಹೆಚ್ಚು ಸಕ್ರಿಯವಾಗಿರುತ್ತದೆ. ಈ ಭಾಗ ಮುನ್ನೆಚ್ಚರಿಕೆಗೆ ಸಂಬಂಧಿಸಿದಂತೆ ಪ್ರಮುಖವಾಗಿದೆ.

ವೃದ್ಧರು ಸಾಮಾನ್ಯವಾಗಿ ಬದಲಾವಣೆಯ ಅಪಾಯ ಎದುರಿಸಲು ಬಯಸುವುದಿಲ್ಲ. ಹೀಗಾಗಿ ವಿರೋಧ ಪಕ್ಷಗಳು ಬಂದರೆ ಪರಿಸ್ಥಿತಿ ಹಾಗಾಗುತ್ತದೆ, ಹೀಗಾಗುತ್ತದೆ ಎಂದು ಆಡಳಿತಾರೂಢರು ಹೇಳುವುದು ವೃದ್ಧರ ಮನಸ್ಸಿಗೆ ಹೆಚ್ಚು ನಾಟುತ್ತದೆ.

ಅಂದ ಹಾಗೆ ರಾಜಕಾರಣಿಗಳು ಇಂತಹ ಪಾಠಕ್ಕಾಗಿ ನರಮಂಡಲ ಶಾಸ್ತ್ರ ಕಲಿಯಬೇಕು ಎಂದೇನೂ ಇಲ್ಲ. ವಿಶ್ವದಾದ್ಯಂತ ರಾಜಕಾರಣಿಗಳು ಹಿಂದಿನಿಂದಲೂ ಹೆದರಿಕೆ ಹಾಗೂ ಎಚ್ಚರಿಕೆಯ ತಂತ್ರಗಳನ್ನು ಬಳಸುತ್ತಾ ಬಂದಿದ್ದಾರೆ.

ಆ ಪಕ್ಷ ಬಂದರೆ ಮಂಗಳಸೂತ್ರ ಕಸಿಯುತ್ತದೆ, ಈ ಪಕ್ಷ ಬಂದರೆ ಸಂವಿಧಾನ ರದ್ದು ಮಾಡುತ್ತದೆ ಎಂದು ಭಾರತದ ಚುನಾವಣಾ ವೇಳೆ ರಾಜಕೀಯ ಧ್ವನಿಗಳು ಕೇಳಿ ಬಂದಿದ್ದವು.

ಬ್ರಿಟನ್ ಚುನಾವಣೆ ಸಂದರ್ಭದಲ್ಲೂ ಅಲ್ಲಿನ ಪ್ರಧಾನ ಮಂತ್ರಿ ರಿಶಿ ಸುನಕ್ ಅವರು, ವಿರೋಧ ಪಕ್ಷಗಳ ಬಗ್ಗೆ ಹೆದರಿಕೆ ಹುಟ್ಟಿಸುವ ಯತ್ನ ನಡೆಸುತ್ತಿದ್ದಾರೆ. ಪಿಂಚಣಿಗಳಿಂದ ಹಿಡಿದು ಅಣು ಪ್ರತಿರೋಧದವರೆಗೆ ಹಲವು ಪ್ರಚಾರ ವಿಷಯಗಳು ಹೆದರಿಕೆ - ಎಚ್ಚರಿಕೆ ಸೂತ್ರ ಆಧರಿಸಿವೆ.

**ಅನಗತ್ಯ ಹೆದರಿಕೆಯಿಂದ ತಪ್ಪು ನಿರ್ಧಾರ**

ಅನಗತ್ಯ ಹೆದರಿಕೆಯಿಂದಾಗಿ ಮತದಾರರು ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಬ್ರಿಟನ್ ಇತಿಹಾಸದಲ್ಲಿ ಕಂಡು ಬಂದಿದೆ. ಕೆಲವೊಮ್ಮೆ ಆರ್ಥಿಕತೆಯಿಂದ ಆಗುವ ಪರಿಣಾಮಗಳು ದೀರ್ಘಾವಧಿಯದ್ದಾಗಿರುತ್ತವೆ.

ಒಂದು ಪಕ್ಷ ತಪ್ಪು ಆರ್ಥಿಕ ನಿರ್ಧಾರ ತೆಗೆದುಕೊಂಡು ಸಮಸ್ಯೆ ಸೃಷ್ಟಿಸಿರುತ್ತದೆ. ಈ ತಪ್ಪು ನಿರ್ಧಾರಗಳು ದುಷ್ಪರಿಣಾಮ ಬೀರುವಾಗ ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂದಿರಬಹುದು. ಇಂತಹ ಸಂದರ್ಭದಲ್ಲಿ ಜನರು ತಪ್ಪು ಮಾಡದೇ ಇರುವ ಪಕ್ಷವನ್ನೇ ದೂರುವುದು ಕಂಡು ಬಂದಿದೆ.

1992ರಲ್ಲಿ ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷ ಹಾಗೂ 1979ರಲ್ಲಿ ಲೇಬರ್ ಪಕ್ಷಗಳು ಪರಾಭವಗೊಂಡಿದ್ದವು. ಆದರೆ, ಆಗಿನ ಆರ್ಥಿಕ ಸಮಸ್ಯೆಗಳು ಈ ಪಕ್ಷಗಳ ಸರ್ಕಾರಗಳ ಕೈ ಮೀರಿದ ವಿಷಯವಾಗಿತ್ತು. 1973ರಲ್ಲಿ ಮಧ್ಯಪ್ರಾಚ್ಯದಲ್ಲಿ ಉಂಟಾದ ತೈಲ ಬಿಕ್ಕಟ್ಟಿನಿಂದಾಗಿ ಕನ್ಸರ್ವೇಟಿವ್ ಪ್ರಧಾನ ಮಂತ್ರಿ ಎಡ್ವರ್ಡ್ ಹೀತ್ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಆರ್ಥಿಕ ಸಂಕಷ್ಟಕ್ಕೆ ಪಕ್ಷವೊಂದು ಕಾರಣ ಎಂಬ ಭಾವನೆ ಜನರಲ್ಲಿ ಮೂಡುವುದು ಚುನಾವಣಾ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ಒಂದೊಮ್ಮೆ ಆರ್ಥಿಕತೆ ಚೇತರಿಕೆಯ ಹಾದಿಯಲ್ಲಿದ್ದರೂ ಆಡಳಿತಾರೂಢರ ಆರೋಪ ಹಾಗೂ ಟೀಕೆಗಳಿಂದ ತಪ್ಪಿಸಿಕೊಳ್ಳಲಾಗದು. ಇದು ಚುನಾವಣೆಯ ಮೇಲೂ ಪರಿಣಾಮ ಬೀರುತ್ತದೆ.

ಬ್ರಿಟನ್‌ನ ಸುನಕ್ ಸರ್ಕಾರ ಈಗ ಆರ್ಥಿಕತೆಯನ್ನು ಸರಿಪಡಿಸುವ ಯೋಜನೆ ಜಾರಿಗೆ ತರುತ್ತಿರುವುದಾಗಿ ಹೇಳುತ್ತಿದೆ. ಆದರೆ, ಇತಿಹಾಸದಲ್ಲಿ ಮತದಾರರು ವರ್ತಿಸಿರುವ ರೀತಿಯನ್ನು ನೋಡಿದರೆ, ಚುನಾವಣೆಯಲ್ಲಿ ಸಮಸ್ಯೆ ಎದುರಾಗುವುದು ನಿಶ್ಚಿತ.

# ಲೋಡ್ ಶೆಡ್ಡಿಂಗ್ ಆಗದಂತೆ ವಿದ್ಯುತ್ ಪೂರೈಕೆ

(1ನೇ ಪುಟದಿಂದ) 2023 ನವೆಂಬರ್‌ನಿಂದ 2024 ಮೇ ವರೆಗೂ ವಿದ್ಯುತ್ ವಿನಿಮಯದ ಒಪ್ಪಂದ ಮಾಡಿಕೊಂಡು ಗ್ರಾಹಕರಿಗೆ ವಿದ್ಯುತ್ ಪೂರೈಸಲಾಗಿದೆ. ಇದೇ ಜೂನ್ 16ರಿಂದ ಈ ಎರಡೂ ರಾಜ್ಯಗಳಿಗೆ ವಿದ್ಯುತ್ ಹಿಂತಿರುಗಿಸಲಾಗುತ್ತದೆ. ಇದರಿಂದಾಗಿ ವಿದ್ಯುತ್ ಖರೀದಿ ಅಗತ್ಯ ಕಡಿಮೆಯಾಯಿತು ಎಂದರು. ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆ ಹಾಗೂ ವಿದ್ಯುತ್ ಕಾಯ್ದೆ ಸೆಕ್ಷನ್ 11 ಜಾರಿಗೊಳಿಸಿ ರಾಜ್ಯದಲ್ಲಿನ ಖಾಸಗಿ ವಿದ್ಯುತ್ ಉತ್ಪಾದಕರು ರಾಜ್ಯ ಗ್ರಿಡ್‌ಗೆ ವಿದ್ಯುತ್ ನೀಡುವಂತೆ ಮಾಡಿ ಬೇಸಿಗೆಯ ವಿದ್ಯುತ್ ಬೇಡಿಕೆ ಪೂರೈಸಲಾಗಿದೆ.

ಈ ಬಾರಿ ವಿದ್ಯುತ್ ಬೇಡಿಕೆ ಹೆಚ್ಚಿದ್ದು, ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಒದಗಿಸುವುದು ನಮ್ಮ ಜವಾಬ್ದಾರಿ. ಅದರಂತೆ ಹೊರ ರಾಜ್ಯಗಳೊಂದಿಗೆ ವಿನಿಮಯ ಒಪ್ಪಂದ ಮಾಡಿಕೊಂಡೆವು, ಮಾರುಕಟ್ಟೆಯಿಂದ ಖರೀದಿಸಿದೆವು. ಒಟ್ಟಾರೆಯಾಗಿ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ಬಿಕ್ಕಟ್ಟಿಲ್ಲದಂತೆ, ಜನರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಂಡಿದ್ದೇವೆ ಎಂದು ಸಚಿವರು ಹೇಳಿದರು.

ರಾಜ್ಯದ 3 ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಕಳೆದ ವರ್ಷ ಗರಿಷ್ಠ 22,000 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ ಎಂದರು.

ಕಳೆದ ಮುಂಗಾರು ಮತ್ತು ಹಿಂಗಾರಿನಲ್ಲಿ ಮಳೆ ಕೊರತೆಯಿಂದ ಆಗಸ್ಟ್‌ನಿಂದಲೇ ಬೇಸಿಗೆ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೊದಲೇ ಮುನ್ನೆಚ್ಚರಿಕೆ ವಹಿಸಿದ ಪರಿಣಾಮ ಹೆಚ್ಚು ಸಮಸ್ಯೆಯಾಗದಂತೆ ನೋಡಿಕೊಳ್ಳಲು ಸಾಧ್ಯವಾಯಿತು.

ಯಾವುದೇ ಕಾರಣಕ್ಕೂ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದರು, ಅದಕ್ಕೆ ತಕ್ಕಂತೆ ವಿದ್ಯುತ್ ಪೂರೈಕೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ಜೂನ್ ಅಂತ್ಯದವರೆಗೆ ವಿದ್ಯುತ್ ಉತ್ಪಾದನೆಗೆ ಸಮಸ್ಯೆಯಾಗದಂತೆ ಅಗತ್ಯ ನೀರು ಸಂಗ್ರಹಿಸಿಟ್ಟುಕೊಳ್ಳಲಾಗಿದೆ ಎಂದರು.

# ಹರಿಹರ ತಾ. ರೈತ ಸಂಘ-ಹಸಿರು ಸೇನೆ ಅಧ್ಯಕ್ಷರಾಗಿ ಬಸವರಾಜಪ್ಪ ಹಲಸಬಾಳು

ಹರಿಹರ,ಜೂ.10- ನಗರದ ಎಪಿಎಂಸಿ ಸಭಾಂಗಣದಲ್ಲಿ ಇಂದು ಸಭೆ ಸೇರಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ತಾಲ್ಲೂಕು ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಗೌರವ ಸಲಹಾ ಅಧ್ಯಕ್ಷರಾಗಿ ಪರಮೇಶ್ವರಪ್ಪ ಭಾನುವಳ್ಳಿ, ಗೌರವ ಅಧ್ಯಕ್ಷರಾಗಿ ಬಿ.ಕೆ.ದೊಡ್ಡಪ್ಪ ಹಾಲಿವಾಣ, ಅಧ್ಯಕ್ಷರಾಗಿ ಹೆಚ್.ಬಿ ಬಸವರಾಜಪ್ಪ ಹಲಸಬಾಳು, ಉಪಾಧ್ಯಕ್ಷರಾಗಿ ಡಿ.ಬಿ ನಂದೀಶ್ ನಂದಿತಾವರೆ ಮತ್ತು ಬಿ.ಹೆಚ್.ಗದಿಗೆಪ್ಪ ಗೋವಿನಹಾಳ್, ಕಾರ್ಯಾಧ್ಯಕ್ಷರಾಗಿ ಡಿ. ರೇವಣ ಸಿದ್ದಪ್ಪ ಹನಗವಾಡಿ, ಪ್ರಧಾನ ಕಾರ್ಯದರ್ಶಿಯಾಗಿ ಜಿ. ಕೆ.ರಾಘವೇಂದ್ರ ನಂದಿತಾವರೆ, ಹಸಿರು ಸೇನೆ ಅಧ್ಯಕ್ಷರಾಗಿ ಬಿ.ಎನ್.ಹನುಮಂತಪ್ಪ ಶಿವನಹಳ್ಳಿ, ಉಪಾಧ್ಯಕ್ಷರಾಗಿ ಕೆ.ಹೆಚ್.ಮಾಲತೇಶ್ ಜಿಗಳಿ ಮತ್ತು ಖಜಾಂಚಿಯಾಗಿ ಹೆಚ್. ಸಿ.ತಿಪ್ಪೇಶಸ್ವಾಮಿ ಕೆ.ಎನ್ ಹಳ್ಳಿ ಇವರುಗಳನ್ನು ಆಯ್ಕೆ ಮಾಡಲಾಯಿತು.



# ಮನೆಗಳ ನಿರ್ಮಾಣಕ್ಕೆ ಕೇಂದ್ರದ ನೆರವು

(1ನೇ ಪುಟದಿಂದ) ಕೋಟಿ ಹೆಚ್ಚುವರಿ ಮನೆಗಳಿಗೆ ನೆರವು ನೀಡಲು ನಿರ್ಧರಿಸಲಾಗಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

2015-16ರಿಂದ ಪಿ.ಎಂ.ಎ.ವೈ. ಯೋಜನೆ ಜಾರಿಗೆ ತರಲಾಗಿದೆ.


**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ತಿಮ್ಮಾರೆಡ್ಡಿ ಕಾಲೇಜ್ ಎದುರುಗಡೆ 30x60, 30x60 North ಅಕ್ಕ-ಪಕ್ಕ, 30x46, 30x46 South ಅಕ್ಕ-ಪಕ್ಕ, 30x45 North-East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ನಮ್ಮ ಅಂಗಡಿಯಲ್ಲಿ ಸೇಲ್ಸ್ ಮಾಡಲು ಪುರುಷ ಅಥವಾ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಹರಿಹರದಲ್ಲಿ ಸೈಟುಗಳು ಮಾರಾಟಕ್ಕಿವೆ**
ಹರಿಹರದ ವಿನಾಯಕ ಬಡಾವಣೆಗೆ ಹತ್ತಿಕೊಂಡು ಇರುವ ಸೇವಾಲಾಲ್ ಬಡಾವಣೆಯಲ್ಲಿ ಸೈಟುಗಳು ದೊರೆಯುತ್ತವೆ. ಸಂಪರ್ಕಿಸಿ:
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ :97424 34049

**ಸ್ಪೋಕನ್ ಇಂಗ್ಲಿಷ್**
1 to 9th ಟ್ಯೂಷನ್
ಡೆಮೋ ಉಚಿತ
ಮಿರಜ್‌ಕರ್ ಟ್ಯುಟೋರಿಯಲ್
90369 96243

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್-1
ಆಪೇ ಆಟೋ ಓಡಿಸಬಲ್ಲ ಲೈಸನ್ಸ್‌ವುಳ್ಳ ಡ್ರೈವರ್-1
ಎಸ್ ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಕೆಲಸಕ್ಕೆ ಬೇಕಾಗಿದ್ದಾರೆ.
ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
9448233326, 7899135660

**Property Hub**
• EC
• E-swathu
• Building Licence
• Khatha Change
96118 66449

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 40x60 West, 40x60 North, 40x60 East, 40x60 South, 30x50 West, 60 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ ಅಕ್ಕ-ಪಕ್ಕ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಬಯೋಡೇಟಾ ಮತ್ತು ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ನವೋದಯ ಚಿಟ್ ಫಂಡ್ಸ್
ನಂ. 34, ಮುರುಘ ರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಶಾಲೆಗೆ ವಾಹನ ಚಾಲಕರು ಕೆಲಸಕ್ಕೆ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗೆ ಈ ಕೂಡಲೇ ಸಂಪರ್ಕಿಸಿ.
ಎಮ್‌ಇಎಸ್ ಕಾನ್ವೆಂಟ್
ಆಂಜನೇಯ ಬಡಾವಣೆ, ದಾವಣಗೆರೆ -4
9880436414

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ 20 ರಿಂದ 35 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ : SSLC, PUC ಆದವರಿಗೆ
80731 81729

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಸಿಲಿಂಡರ್ ಡೆಲಿವರಿ ಬಾಯ್ಸ್ ಕಂ ಆಟೋ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
98441-14143

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 19.07.2024 ರಿಂದ 26.07.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಗಯಾ, ಬುದ್ದಗಯಾ ಪ್ರವಾಸಕ್ಕೆ ಕೇವಲ 15 ಸೀಟುಗಳು ಇವೆ.
ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಗುಮಾಸ್ತರು ಬೇಕಾಗಿದ್ದಾರೆ. ಆಸಕ್ತರು ಬೆಳಿಗ್ಗೆ 11 ರಿಂದ ಸಂಜೆ 5 ರೊಳಗೆ ಕರೆ ಮಾಡಿ:
9844098780

**NEET, K-CET**
Long Term
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ಸೈಟುಗಳು ಮಾರಾಟಕ್ಕಿವೆ**
ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆಹೆಚ್‌ಬಿ ಪಕ್ಕದ 30X40 ಅಳತೆಯ 6 ಸೈಟುಗಳು ದೂಡಾ ಅನುಮೋದನೆ, ನಗರಸಭಾ ಡೋರ್ ನಂಬರ್, ಬ್ಯಾಂಕ್ ಸಾಲ ಸೌಲಭ್ಯವಿರುವ ಸೈಟುಗಳು ನೇರ ಮಾರಾಟಕ್ಕಿವೆ.
98809 33630

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED**
• Salesman
• ITI Fitter
attractive salary with PF and ESI
Ambika Furniture
843, Ashoka Road, Davanagere-577002
88844 88092, 99167 93795

**ಅಡಿಕೆ ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ, ಬೇಕಾದಲ್ಲಿ ಸಂಪರ್ಕಿಸಿ :
98441 22269
86182 17245

**ಖಾಲಿ ನಿವೇಶನ ಬಾಡಿಗೆಗೆ ಬೇಕಾಗಿದೆ**
ದಾವಣಗೆರೆ ಮಹಾನಗರ ವ್ಯಾಪ್ತಿಗೆ ಬರುವ ಯಾವುದೇ ವಾರ್ಡ್‌ನಲ್ಲಿರುವ ವಾಣಿಜ್ಯ ಉಪಯೋಗಕ್ಕೆ ಅಲಿನೇಷನ್ ಆಗಿರುವ 20,000 ಚ. ಅಡಿ. ಖಾಲಿ ನಿವೇಶನವು 15 ವರ್ಷಕ್ಕೆ ನೆಲಬಾಡಿಗೆ ರೂಪದಲ್ಲಿ ಬೇಕಾಗಿದೆ. ವಾರ್ಷಿಕ ಬಾಡಿಗೆ ಕನಿಷ್ಠ 3 ಲಕ್ಷ, ಗರಿಷ್ಠ 3.60 ಲಕ್ಷ ರೂವರೆಗೆ ಮಾತ್ರ ಇದ್ದಲ್ಲಿ ಹಾಗೂ ಭೂಮಿಯ ಯಾವುದೇ ರೀತಿಯ ಕಾನೂನು ಸಮಸ್ಯೆಗಳು ಇಲ್ಲದೇ ಇರುವ ನಿವೇಶನ ಇದ್ದಲ್ಲಿ ಮಾತ್ರ ಸಂಪರ್ಕಿಸಿ.
96063 07471

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
ಸೌಂದರ್ಯ ಸಾಧನಗಳ ಅಂಗಡಿಗೆ ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ : ರೂಪಕಲಾ
ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ
94483 18917

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
Rachana Powercom, P.J. Extension UPS ಕಂಪನಿಯಲ್ಲಿ ಕೆಲಸ ಮಾಡಲು ಮಹಿಳೆ & ಹುಡುಗರು ಬೇಕಾಗಿದ್ದಾರೆ.
ಮಹಿಳೆ : Tally, Accounts, Computer work. ಹುಡುಗರು : Any Degree, ITI, Any Qualification
94498 35217, 08192 235217
ಭೇಟಿ ಸಮಯ : 12 ರಿಂದ 5 ರವರೆಗೆ

**ಸೈಟುಗಳು ಮಾರಾಟಕ್ಕಿವೆ**
ತಾಜ್ ಪ್ಯಾಲೇಸ್ ಹತ್ತಿರ ಬಿ.ಎನ್. ಲೇಔಟ್, ಸುಲ್ತಾನ್ ಲೇಔಟ್, ಮುಬಾರಕ್ ಪ್ಯಾಲೇಸ್ ಹತ್ತಿರ, ಬದ್ರಿಯಾ ಲೇಔಟ್ ಉತ್ತಮ ದರದಲ್ಲಿ ನೇರ ಸೈಟ್ ಮಾಲೀಕರಿಂದ ವ್ಯಾಪಾರ ಕೊಡಿಸುತ್ತೇವೆ. ಅಳತೆ 20x30, 15x40, 30x40 ಎಲ್ಲಾ ಅಳತೆಯ ಸೈಟ್‌ಗಳಿವೆ. ಆಸಕ್ತರು ಸಂಪರ್ಕಿಸಿ :
SK Real Estate : Amjad Khan . K
97430 93568

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಶಿಕ್ಷಕಿಯರು ಬೇಕಾಗಿದ್ದಾರೆ**
(ಕಾಡಜ್ಜಿ)
Play Group, LKG
1 to 7th class
Quali : PUC, NTC, D.Ed, PE Master (Male)
ಉಚಿತ ಸಾರಿಗೆ ಸೌಲಭ್ಯವಿದೆ.
99729 35569

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**FACTORY (OR ) GODOWN FOR RENT**
3800 sqft KIADB
Factory Rent used
wood machinery sale
92421 45611

**ಶಿಕ್ಷಕಿಯರು ಬೇಕಾಗಿದ್ದಾರೆ**
B Sc, B.Ed-1
B.A, B.Ed- 1
TCH/D.Ed-1
Computer -1
ಸಂಪರ್ಕಿಸಿ: ಶಿವಗಂಗೋತ್ರಿ ಹೈಯರ್ ಪ್ರೈಮರಿ ಸ್ಕೂಲ್, ಶಾಮನೂರು,
ಮೊ : 81518 52444

**ಮನೆ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ, ಉತ್ತರಕ್ಕೆ ಬಾಗಿಲಿರುವ, ವಾಸ್ತುವುಳ್ಳ ಡಬಲ್ ಬೆಡ್ ರೂಂ ಮನೆ ಬಾಡಿಗೆಗಿದೆ.
#1859/34, "ಭಾವ ಸಂಗಮ"
4ನೇ ಮೇನ್, LIC ಕಾಲೋನಿ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ-4.
9448746875, 8050357533

**ವಧು ಬೇಕಾಗಿದೆ**
38 ವರ್ಷದ ರೈತ ಕುಟುಂಬ, ವಾಲ್ಮೀಕಿ ಜನಾಂಗದ ಟಿ.ಎ. ನಾಗರಾಜ್ ಎಂಬುವವರಿಗೆ 2ನೇ ಮದುವೆಗೆ ವಧು ಬೇಕಾಗಿದೆ.
98869 77882, 84313 93669

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
81500 57888

**ಮದ್ಯಪಾನ ಬಿಡಬೇಕೆ ?**

ಉಬ್ಬಸ ರೋಗ, ಕಾಲು ನೋವು, ಅಲರ್ಜಿ, ಮಧುಮೇಹ, ವೈಟ್‌ಗೈನ್ ಮತ್ತು ವೈಟ್ ಲಾಸ್, ಗ್ಯಾಸ್ಟ್ರಿಕ್ ಇತ್ಯಾದಿಗಳಿಗೆ ನಮ್ಮನ್ನು ಸಂಪರ್ಕಿಸಿ.
ಪ್ರತಿ ತಿಂಗಳು 12 ಮತ್ತು 13 ರಂದು
ವಿಳಾಸ : ಶ್ರೀ ಲಾಡ್ಜ್,
ಡಾ।। ಶರ್ಮ
ಸಮಯ : ಬೆ. 10 ರಿಂದ ಮಧ್ಯಾಹ್ನ 3
98869 40831

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
6ನೇ ಲಕ್ಕಿ ಡ್ರಾ ವಿನ್ನರ್
635
ಸಮರ್ಥ ಜಿ.
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಗುರು ಬಕ್ಕೇಶ್ವರ ಚಿಟ್ಸ್ ಫಂಡ್ ರಿ. ಮಾರ್ಕೆಟಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆ.ಬಿ. ಬಡಾವಣೆ, 5ನೇ ಕ್ರಾಸ್, ಜಾಧವ್ ಕ್ಲಿನಿಕ್ ಹತ್ತಿರ, ದಾವಣಗೆರೆ-2.
97383 65782

**WANTED**
ಪುರುಷ ಕೆಲಸಗಾರರು ಎಕ್ಸ್‌ಕ್ಲೂಸಿವ್ ಶೋರೂಮ್‌ಗಾಗಿ ಅಗತ್ಯವಿದೆ. ಸಂಪರ್ಕಿಸಿ :
98867 57688

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕೆಲಸಕ್ಕೆ ಬೇಕಾಗಿದ್ದಾರೆ**
ಡಿಎಸ್‌ವಿ ಆಫೀಸ್‌ಗೆ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಟೆಲಿಕಾಲಿಂಗ್ & ಆಫೀಸ್ ವರ್ಕ್, ಆಕರ್ಷಕ ಸಂಬಳ + ಇನ್‌ಸೆಂಟಿವ್:
97385 60365

**ಮನೆ ಬಾಡಿಗೆಗೆ ಇದೆ**
ಭಗತ್ ಸಿಂಗ್ ನಗರ, 12ನೇ ಕ್ರಾಸ್, 974/80 ಎ, ಸಸ್ಯಹಾರಿಗಳಿಗೆ ಮಾತ್ರ, ಮಧ್ಯವರ್ತಿಗಳಿಗೆ ಅವಕಾಶ ಇಲ್ಲ.
98805 74850

## ಶಾಸಕ ವಿನಯ್ ಕುಲಕರ್ಣಿ ವಿರುದ್ಧದ ಆರೋಪ ವಜಾಕ್ಕೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಜೂ. 10 – ಮಾಜಿ ಸಚಿವ ಹಾಗೂ ಶಾಸಕ ವಿನಯ್ ಕುಲಕರ್ಣಿ ವಿರುದ್ಧ ದಾಖಲಾಗಿರುವ ಹತ್ಯೆ ಆರೋಪವನ್ನು ವಜಾಗೊಳಿಸಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. 2016ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತ ಯೋಗೇಶ್ ಗೌಡ ಅವರ ಹತ್ಯೆ ಮಾಡಿದ ಆರೋಪ ಕುಲಕರ್ಣಿ ಮೇಲಿದೆ.

ಈ ಆರೋಪ ವಜಾಗೊಳಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು.

ಕುಲಕರ್ಣಿ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ ದಾವೆ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಸಿ.ಬಿ.ಐ.ನ ಎರಡನೇ ಆರೋಪ ಪಟ್ಟಿಯಲ್ಲಿ ಮಾತ್ರ ಶಾಸಕರ ಹೆಸರಿದೆ. ಹತರಾದ ಯೋಗೇಶ್ ಗೌಡ ಅವರ ವಿಧವಾ ಪತ್ನಿ ಸಹ ಕುಲಕರ್ಣಿ ಹೆಸರು ಹೇಳಿಲ್ಲ ಎಂದು ತಿಳಿಸಿದರು. ಆದರೆ, ಆರೋಪ ಕೈ ಬಿಡಲು ಸುಪ್ರೀಂ ಕೋರ್ಟ್ ಒಲವು ತೋರಲಿಲ್ಲ. ನಂತರ ದಾವೆ ತಮ್ಮ ಅರ್ಜಿ ವಾಪಸ್ ಪಡೆಯಲು ಅನುಮತಿ ಕೋರಿದರು.

ಇದಕ್ಕೆ ಒಪ್ಪದ ಸುಪ್ರೀಂ ಕೋರ್ಟ್ ಪೀಠ, ನೀವು ಸುಪ್ರೀಂ ಕೋರ್ಟ್‌ನಲ್ಲಿ ಅದೃಷ್ಟ ಪರೀಕ್ಷೆ ಮಾಡಲು ಮುಂದೆ ಬರುತ್ತೀರಿ. ಅವಕಾಶ ಇಲ್ಲ ಎಂದಾಗ ಹಿಂದೆ ಸರಿಯುತ್ತೀರಿ. ಇದೇನು ಜೂಜಾಟದ ಕಟ್ಟೆಯೇ? ಇಂಥದು ನಿಲ್ಲಬೇಕು. ನಾವು ಅರ್ಜಿಯನ್ನು ತಳ್ಳಿ ಹಾಕುತ್ತೇವೆ ಎಂದು ತಿಳಿಸಿತು.

ಕುಲಕರ್ಣಿ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಿರುವ ಆರೋಪದ ವಿಷಯಕ್ಕೆ ಸಂಬಂಧಿಸಿದಂತೆ ಮಧ್ಯ ಪ್ರವೇಶಿಸಲು ಏಪ್ರಿಲ್ 8ರಂದು ಹೈಕೋರ್ಟ್ ನಿರಾಕರಿಸಿತ್ತು. ವಿಶೇಷ ನ್ಯಾಯಾಲಯ ವಿಚಾರಣೆ ಮುಂದುವರೆಸಬೇಕು, ಸಾಧ್ಯವಾದಲ್ಲಿ ಮೂರು ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಬೇಕು ಎಂದು ಹೈಕೋರ್ಟ್ ಹೇಳಿತ್ತು.

# ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುವಂತಾಗಬೇಕು

### ಪೊಲೀಸ್ ಚಿಣ್ಣರ ಅಂಗಳ ಪ್ರಿ ಸ್ಕೂಲ್‌ನ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಎಸ್ಪಿ ಉಮಾ ಪ್ರಶಾಂತ್

ದಾವಣಗೆರೆ, ಜೂ.10- ಪ್ರತಿಯೊಂದು ಮಗುವಿನಲ್ಲೂ ಸುಪ್ತವಾಗಿರುವ ಪ್ರತಿಭೆಗಳು ಅಡಗಿದ್ದು, ಅವುಗಳನ್ನು ಹೆಕ್ಕಿ ತೆಗೆಯುವುದು ಶಿಕ್ಷಣದ ಮೂಲ ಉದ್ದೇಶವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ಪಿ.ಜೆ. ಬಡಾವಣೆಯ ಪೊಲೀಸ್ ವಸತಿಗೃಹ ಸಮೀಪ ನೂತನವಾಗಿ ಆರಂಭಿಸಿರುವ ಪೊಲೀಸ್ ಚಿಣ್ಣರ ಅಂಗಳ ಪ್ರಿ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಸರಸ್ವತಿ ಪೂಜೆ ಮತ್ತು ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶೇಷವಾಗಿ ಪೊಲೀಸರ ಮಕ್ಕಳಿಗೆ ಗುಣಮಟ್ಟದ ಹಾಗೂ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವುದು ಪೊಲೀಸ್ ಚಿಣ್ಣರ ಅಂಗಳ ಶಾಲೆಯ ಮುಖ್ಯ ಉದ್ದೇಶವಾಗಿದೆ ಎಂದರು. ಗುಣಮಟ್ಟದ ಶಿಕ್ಷಣವನ್ನು ಸಾಧ್ಯವಾದಷ್ಟು ಕಡಿಮೆ ಶುಲ್ಕದಲ್ಲಿ ನೀಡಲು ಇಲಾಖೆ ಪ್ರಯತ್ನಿಸುತ್ತಿದೆ. ಬಾಲ್ಯದಲ್ಲಿ ಮಕ್ಕಳಿಗೆ



ನೀಡುವ ಶಿಕ್ಷಣ ಮತ್ತು ಕಲಿಸುವ ಮೌಲ್ಯಗಳು ಅವರ ಜೀವನದುದ್ದಕ್ಕೂ ಉಳಿಯುತ್ತವೆ. ಕಾರಣ ಪೋಷಕರು ಮಕ್ಕಳನ್ನು ಉತ್ತಮವಾಗಿ ಬೆಳೆಸುವತ್ತಾ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಪೊಲೀಸ್ ಚಿಣ್ಣರ ಶಾಲೆಯಲ್ಲಿ ಕಿಂಡರ್ ಗಾರ್ಡನ್‌ವರೆಗೂ ಶಿಕ್ಷಣ ಲಭ್ಯವಿದ್ದು, ಯುಕೆಜಿ ಪೂರ್ಣಗೊಂಡ ಬಳಿಕ ಅವರನ್ನು ಕೊಂಡಜ್ಜಿಯ ಪೊಲೀಸ್ ಪಬ್ಲಿಕ್ ಶಾಲೆಗೆ ಸೇರಿಸಲು ಅವಕಾಶ ಎಂದು ತಿಳಿಸಿದರು. ಇತ್ತೀಚೆಗೆ ನೀಟ್ ಪರೀಕ್ಷೆಯಲ್ಲಿ ನಮ್ಮ ಪೊಲೀಸ್ ಸಿಬ್ಬಂದಿಯ ಪುತ್ರಿ ಒಬ್ಬರು 500 ನೇ ರ್‍ಯಾಂಕ್ ಪಡೆದಿದ್ದಾರೆ. ಅವರಂತೆ ಹೆಚ್ಚಿನ ಪೊಲೀಸರ ಮಕ್ಕಳು ಸಾಧನೆ ಮಾಡಲು ಮುಂದಾಗಬೇಕು. ಪೊಲೀಸರು ತಮ್ಮ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ನೀಡುವ ಮೂಲಕ ತಮಗಿಂತಲೂ ಎತ್ತರದ ಹುದ್ದೆಗೆ ಏರಿಸಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಸರಸ್ವತಿ ಪೂಜೆ ನೆರವೇರಿಸಿ, ಶಾಲೆಗೆ ದಾಖಲಾಗಿರುವ ಮಕ್ಕಳಿಗೆ ಅವರ ಪೋಷಕರ ನೆರವಿನಿಂದ ಶಾಸ್ತ್ರೋಕ್ತವಾಗಿ ಅಕ್ಷರಭ್ಯಾಸ ಮಾಡಿಸಲಾಯಿತು.

ಎಎಸ್‌ಪಿಗಳಾದ ವಿಜಯ್ ಕುಮಾರ್ ಎಂ. ಸಂತೋಷ್, ಮಂಜುನಾಥ್, ನಗರ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ನಿವೃತ್ತ ಪೊಲೀಸ್ ಅಧಿಕಾರಿ ರವಿನಾರಾಯಣ, ಸೋಮಶೇಖರ್, ಶಾಲೆಯ ಪ್ರಿನ್ಸಿಪಾಲ್ ಹೆಚ್.ವಿ. ಯತೀಶ್ ಇತರರಿದ್ದರು.

## ಪ್ರಭಾ ಗೆಲುವು : ಇಂದು ಹರಕೆ ಸಲ್ಲಿಕೆ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ವೀರಭದ್ರಸ್ವಾಮಿ ಮಟ್ಟಿಕಲ್ ಅವರು ಇಂದು ಬೆಳಿಗ್ಗೆ 11 ಗಂಟೆಗೆ 108 ತೆಂಗಿನಕಾಯಿ ಒಡೆಯುವ ಮೂಲಕ ಹರಕೆ ತೀರಿಸಲಿದ್ದಾರೆ.

ಕಳೆದ ಏಪ್ರಿಲ್ 30 ರಂದು ಹಳೇಪೇಟೆಯ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದಿಂದ ಹೊರಟು ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಗುಗ್ಗಳದೊಂದಿಗೆ ದೀಡು ನಮಸ್ಕಾರ ಸೇವೆಯನ್ನು ವೀರಭದ್ರಸ್ವಾಮಿ ನೆರವೇರಿಸಿದ್ದರು. ಬಳಿಕ ಬಾಯಿಗೆ ಶಸ್ತ್ರ, ನಾಲಿಗೆಗೆ 108 ಶಿವದಾರ ಧರಿಸಿ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದರಲ್ಲದೇ, ಪ್ರಭಾ ಅವರು ಚುನಾವಣೆಯಲ್ಲಿ ಗೆದ್ದರೆ ಹರಕೆ ತೀರಿಸುವುದಾಗಿ ದೇವರಲ್ಲಿ ಪ್ರಾರ್ಥಿಸಿದ್ದರು. ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಹರಕೆ ತೀರಿಸಿ ವಿಶೇಷ ಪೂಜೆ ಸಮರ್ಪಿಸುವರು.

ಹರಕೆ ತೀರಿಸುವ ವೇಳೆ ಕಾಂಗ್ರೆಸ್ ಮುಖಂಡರಾದ ಡಾ. ಟಿ. ರವಿಕುಮಾರ್, ಕಕ್ಕರಗೊಳ್ಳ ಕಲ್ಲಿಂಗಪ್ಪ, ಎಸ್. ಎಲ್. ಆನಂದಪ್ಪ, ಶಶಿ ಶೇಖರ್, ಅಣಜಿ ಬಸವರಾಜ್, ಅಕ್ಕಿ ಚಂದ್ರು, ಕರೂರು ಗಣೇಶ್, ಡಿ.ಕೆ. ರಾಜೇಂದ್ರ, ಸಿರಿಗೆರೆ ಬಸವರಾಜ್, ರಾಜಾನಾಯ್ಕ, ಅಣಜಿ ಪ್ರಶಾಂತ್, ಕಾಯಿಪೇಟೆ ಹಾಲೇಶಣ್ಣ, ಜಯಣ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಡಿಪ್ಲೋಮಾ ರಂಗಶಿಕ್ಷಣಕ್ಕೆ ಅರ್ಜಿ

ಸಾಣೇಹಳ್ಳಿ, ಜೂ. 10- ಇಲ್ಲಿನ ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯಲ್ಲಿ ರಂಗಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸುಸಜ್ಜಿತ ರಂಗ ಶಾಲೆಗೆ ಸೇರ ಬಯಸುವ ಆಸಕ್ತರು ರಂಗಶಾಲೆಯ ವೆಬ್‌ಸೈಟ್ www.theatreschoolsanehlli.org ಅಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಇದೇ ದಿನಾಂಕ 25ರೊಳಗಾಗಿ 'ಪ್ರಾಚಾರ್ಯರು, ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆ, ಸಾಣೇಹಳ್ಳಿ-577-515 ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ.

ಈ ವಿಳಾಸದ ರಂಗಶಾಲೆಗೆ ಅರ್ಜಿ ಸಲ್ಲಿಸಲು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ 9448398144 ಅಥವಾ 8861043553 ಸಂಪರ್ಕಿಸಿ.

## 18ನೇ ವಾರ್ಡಿನಲ್ಲಿ ಬಿಜೆಪಿ ವಿಜಯೋತ್ಸವ



ದಾವಣಗೆರೆ, ಜೂ. 10- ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮೂರನೇ ಬಾರಿ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ 18ನೇ ವಾರ್ಡಿನ ಕಾಯಿಪೇಟೆಯಲ್ಲಿ ಬಿಜೆಪಿ ಕಾರ್ಯಕರ್ತರು, ನರೇಂದ್ರ ಮೋದಿ ಅಭಿಮಾನಿಗಳು, ಪಟಾಕಿ ಸಿಡಿಸಿ ಸಿಹಿ ತಿನ್ನಿಸಿ ವಿಜೃಂಭಣೆಯಿಂದ ವಿಜಯೋತ್ಸವ ಆಚರಿಸಿದರು.

## ನೀಟ್ ಪರೀಕ್ಷೆ ರದ್ದತಿಗೆ ತಮಿಳುನಾಡು ಸಮಿತಿ ಶಿಫಾರಸ್ಸು

ಚೆನ್ನೈ, ಜೂ. 10 – ವೈದ್ಯಕೀಯ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಲು ತಮಿಳುನಾಡು ಸರ್ಕಾರ ತಕ್ಷಣವೇ ಕಾನೂನು ಹಾಗೂ ಶಾಸನಾತ್ಮಕ ಕ್ರಮ ತೆಗೆದುಕೊಳ್ಳಬೇಕು. ಪಿಯುಸಿ ಪರೀಕ್ಷೆಯ ಆಧಾರದ ಮೇಲೆ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಕಲ್ಪಿಸಬೇಕು ಎಂದು ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಕೆ. ರಾಜನ್ ಅವರ ಸಮಿತಿ ತಮಿಳುನಾಡು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ವಿವಿಧ ಮಂಡಳಿಗಳ ಪರೀಕ್ಷೆಯಲ್ಲಿ ಸಮಾನತೆ ತರಲು ಸರ್ಕಾರ ನಾರ್ಮಲೈಸೇಷನ್‌ಗೆ ಮುಂದಾಗಬೇಕು ಎಂದೂ ನ್ಯಾಯಮೂರ್ತಿ ರಾಜನ್ ನೇತೃತ್ವದ ಉನ್ನತ ಹಂತದ ಸಮಿತಿ ಶಿಫಾರಸ್ಸು ಮಾಡಿದೆ. 2021ರಲ್ಲಿ ಡಿ.ಎಂ.ಕೆ. ಸರ್ಕಾರ ಈ ಸಮಿತಿಯನ್ನು ರಚಿಸಿತ್ತು.

## ವಾಯುವ್ಯ, ಪೂರ್ವ ಭಾರತದಲ್ಲಿ ಮತ್ತೆ ಬಿಸಿಗಾಳಿಯ ಪ್ರಕೋಪ

ನವದೆಹಲಿ, ಜೂ. 10 – ವಾಯುವ್ಯ ಹಾಗೂ ಪೂರ್ವ ಭಾರತದಲ್ಲಿ ಮತ್ತೊಂದು ಸುತ್ತಿನ ಬಿಸಿ ಗಾಳಿಯ ಅಲೆ ಬರಲಿದೆ. ಇದರಿಂದಾಗಿ ಮುಂದಿನ ಐದು ದಿನಗಳ ಕಾಲ ತಾಪಮಾನ ವಾಡಿಕೆಗಿಂತ ಎರಡರಿಂದ ಮೂರೂ ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಹಲವು ತೀವ್ರ ಬಿಸಿಗಾಳಿಯ ಅಲೆಗಳು ಕಂಡು ಬಂದಿದ್ದವು. ಇದರಿಂದಾಗಿ ಸಹಿಸಲಸಾಧ್ಯವಾದ ಬೇಗೆ ಉಂಟಾಗಿತ್ತು. ಉತ್ತರ ಪ್ರದೇಶ, ಬಿಹಾರ ಹಾಗೂ ಒಡಿಶಾ ಸೇರಿದಂತೆ, ಹಲವು ರಾಜ್ಯಗಳು ಬಿಸಿ ಗಾಳಿಯಿಂದ ತತ್ತರಿಸಿದ್ದವು.

ಈಗ ಜೂನ್ ತಿಂಗಳಲ್ಲೂ ಬಿಸಿ ಗಾಳಿಯ ಪ್ರಕೋಪ ಮುಂದುವರೆದಿದೆ. ಇದರಿಂದಾಗಿ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ, ಮಧ್ಯ ಪ್ರದೇಶ, ಜಾರ್ಖಂಡ್, ಒಡಿಶಾ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಬಿಸಿಲ ಬೇಗೆ ಹೆಚ್ಚಾಗಲಿದೆ.

## ವರ್ಷಧಾರೆ

ನನಗೂ ಗೊತ್ತಿಲ್ಲ,
ಅವಳಿಗು ನನಗು ನಂಟು ಏನೆಂದು
ನಾನು ಹೊರ ಹೊರಟರೆ ಸಾಕು
ಅವಳು ಮೇಘಗಳ ಪರದೆ ಸರಿಸಿ ಹೊರ ಬರುತ್ತಾಳೆ.
ಲಜ್ಜೆಯ ಹೊತ್ತು ಒಮ್ಮೆ ಮುಗುಳುತ್ತಾಳೆ ಒಲವಿಗೊಮ್ಮೆ
ಗೆಲುವಾದಾಗ ಕೊಂಚ ಚಿಮ್ಮುತ್ತಾಳೆ, ನೆಗೆಯುತ್ತಾಳೆ,
ಉತ್ಸಾಹದಲ್ಲಿ ಉಲ್ಲಸಿತಗೊಳ್ಳುತ್ತಾಳೆ.

ಬದುಕಿನಲ್ಲಿ ಕಾರ್ಮೋಡ ಕಗ್ಗತ್ತಲು ಕವಿದಾಗ
ಎದೆಗೊರಗಿ ಬಿಕ್ಕಿ,ಬಿಕ್ಕಿ ಅಳುತ್ತಾಳೆ ಹೃದಯವು
ಹಗುರಾಗುವಷ್ಟು.! ಅವಳಳುವಿಗೆ ಇಳೆಯಲ್ಲ ಹಸಿರಾಗಿ
ಧರೆಯೊಮ್ಮೊ ಬಸಿರಾಗಿ ಸಂತೋಷದ ಸುಮವೊಂದು
ಪ್ರಸವವಾದಗ ಅದ ಕಂಡೊಮ್ಮೆ ಮುಗುಳುತ್ತಾಳೆ.

ಅವಳಿಗೂ ಒಮ್ಮೊಮ್ಮೆ ಕಡು ಕೋಪ.! ಕೋಪದ
ತಾಪದಲ್ಲಿ ತನ್ನನ್ನೇ ತಾನೊಮ್ಮೆ ಸುಟ್ಟುಕೊಳ್ಳುತ್ತಾಳೆ,ತಣ್ಣ
ಗಾಗುತ್ತಾಳೆ ತನ್ನ ಕೋಪದ ತಾಪಕ್ಕೆ ಮಮ್ಮಲ ಮರುಗಿ,
ಕೊರಗಿ ಮತ್ತೆ ಬಿಕ್ಕಿ, ಬಿಕ್ಕಿ ಅಳುತ್ತಾಳೆ.


ಅವಳ ಕಣ್ಣೀರ ಹನಿಗಳಿಂದ ಝರಿಯಾಗಿ,
ತೊರೆಯಾಗಿ, ನದಿಯಾಗಿ ಹರಿದು ಎಲ್ಲರನು
ಹಸನುಗೊಳಿಸಿ, ಹರ್ಷಿಸಿ, ಹಸನ್ಮುಖಿಗೊಳಿಸಿ
ಭೋರ್ಗರಿಯುತ್ತ, ಧುಮ್ಮಿಕ್ಕುತ್ತ ತನ್ನೆಲ್ಲಾ ನೋವುಗಳ
ನುಂಗಿ ನೀರವ ಮೌನಕ್ಕೆ ಜಾರಿ ದೂರದ ನೀಲಿಯಲ್ಲಿ
ಮರೆಯಾಗುತ್ತಾಳೆ.

**- ಬಸವರಾಜ ಕರುವಿನ, ಬಸವನಾಳು.**

## ಜನಗಣತಿ ನಡೆಸದೇ 14 ಕೋಟಿ ಜನರಿಗೆ ಆಹಾರ ಭದ್ರತೆ ಕಾಯ್ದೆ ವಂಚನೆ : ಕಾಂಗ್ರೆಸ್

ನವದೆಹಲಿ, ಜೂ. 10 -2021ರ ಜನಗಣತಿ ನಡೆಸದ ಕಾರಣ 14 ಕೋಟಿ ಜನರು ಆಹಾರ ಭದ್ರತಾ ಕಾಯ್ದೆಯ ನೆರವಿನಿಂದ ವಂಚಿತರಾಗಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಜನಗಣತಿ ಯಾವಾಗ ನಡೆಸಲಾಗುತ್ತದೆ ಎಂಬ ಬಗ್ಗೆ ದೇಶಕ್ಕೆ ತಿಳಿಸಬೇಕು. ಜನಗಣತಿಯ ವೇಳೆ ಒ.ಬಿ.ಸಿ. ವರ್ಗದವರ ಗಣತಿಯನ್ನೂ ಮಾಡಬೇಕು. ಆಗ ಮಾತ್ರ ಸಂವಿಧಾನದಲ್ಲಿ ತಿಳಿಸಲಾಗಿರುವ ಸಾಮಾಜಿಕ ನ್ಯಾಯ ದೊರೆಯಲು ಸಾಧ್ಯ ಎಂದರು. 2021ರಲ್ಲಿ ನಡೆಸಬೇಕಿದ್ದ ಜನಗಣತಿಯನ್ನು ಇನ್ನೂ ಕೈಗೊಂಡಿಲ್ಲ. ಇದರಿಂದಾಗಿ ಕನಿಷ್ಠ 14 ಕೋಟಿ ಜನರು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ಯೋಜನೆಗೆ ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆ ಎಂದು ಮರು ನಾಮಕರಣ ಮಾಡಲಾಗಿದೆ ಎಂದು ರಮೇಶ್ ಹೇಳಿದ್ದಾರೆ.

## ಲಿಂಗಾಯತ ಸಮಾಜಕ್ಕೆ ಮೋದಿ ಸಂಪುಟದಲ್ಲಿ ದ್ರೋಹ



ದಾವಣಗೆರೆ, ಜೂ. 10 - ಬಿಜೆಪಿಗೆ ಮೊದಲಿಂದಲೂ ದೊಡ್ಡ ಪ್ರಮಾಣದಲ್ಲಿ ಬೆಂಬಲಿಸಿದ್ದ ಪ್ರಬಲ ಲಿಂಗಾಯತ ಸಮಾಜಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ ಸಚಿವ ಸಂಪುಟದಲ್ಲಿ ಈ ಬಾರಿಯಾದರು ಕ್ಯಾಬಿನೆಟ್ ದರ್ಜೆ ಮಂತ್ರಿ ಸ್ಥಾನ ನೀಡದೇ ದ್ರೋಹ ಬಗೆದಿದ್ದಾರೆಂದು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮೋದಿ ನಡೆಯನ್ನು ತೀವ್ರವಾಗಿ ಟೀಕಿಸಿದ್ದಾರೆ.

ಕಳೆದ ಎರಡು ಬಾರಿ ಸರ್ಕಾರ ನಡೆಸಿದಾಗಲೂ ಲಿಂಗಾಯತ ಸಮುದಾಯಕ್ಕೆ ಕೇವಲ ರಾಜ್ಯ ದರ್ಜೆ ಸಚಿವರನ್ನಾಗಿ ಮಾತ್ರ ಮೋದಿಯವರು ನೀಡುತ್ತಾ ಬಂದಿದ್ದಾರೆ.

ಈ ಬಾರಿಯಾದರೂ ಮಾಜಿ ಮುಖ್ಯ ಮಂತ್ರಿಗಳಾದ ಜಗದೀಶ್ ಶೆಟ್ಟರ್, ಬಸವರಾಜ್ ಬೊಮ್ಮಾಯಿ ಬಿಜೆಪಿಯಿಂದ ಸಂಸದ ರಾಗಿ ಆಯ್ಕೆ ಆಗಿದ್ದು ಲಿಂಗಾಯತ ಸಮಾಜಕ್ಕೆ ಕ್ಯಾಬಿನೆಟ್ ದರ್ಜೆ ಸಚಿವರನ್ನಾಗಿ ಮಾಡಬೇಕಿತ್ತು.

ಆದರೆ ಮೋದಿ ಯವರು ಲಿಂಗಾಯತರು ಕೇವಲ ಬಿಜೆಪಿಗೆ ಮತ ಹಾಕಲು ಇದ್ದಾರೆಂದು ಭಾವಿಸಿ, ಬಿಜೆಪಿಯಲ್ಲಿ ಲಿಂಗಾಯತರನ್ನು ಮೂರನೇ ದರ್ಜೆ ನಾಗರಿಕರಂತೆ ನಡೆಸಿಕೊಳ್ಳುತ್ತಿದ್ದಾರೆಂದು ಅವರು ವಾಗ್ದಾಳಿ ಮಾಡಿದ್ದಾರೆ. ಲಿಂಗಾಯತ ಸಮುದಾಯದ ರಾಜ್ಯದ ನಾಯಕರು ಇನ್ನಾದರು ಬಿಜೆಪಿಗೆ ಬೆಂಬಲಿಸುವುದನ್ನು ಬಿಡಬೇಕು ಎಂದು ಅವರು ಲಿಂಗಾಯತ ನಾಯಕರಲ್ಲಿ ಮನವಿ ಮಾಡಿದ್ದಾರೆ.

ಜೊತೆಗೆ ಎಸ್‌ಸಿ, ಎಸ್‌ಟಿ, ಒಬಿಸಿ ಯವರಿಗೂ ಮೋದಿ ತಮ್ಮ ಸಂಪುಟದಲ್ಲಿ ರಾಜ್ಯದಿಂದ ಪ್ರಾತಿನಿಧ್ಯ ನೀಡದೇ ಸಾಮಾ ಜಿಕ ನ್ಯಾಯಕ್ಕೂ ಅನ್ಯಾಯ ಮಾಡಿ ಕೊಡಲಿ ಪೆಟ್ಟು ನೀಡಿ ದ್ದಾರೆಂದು ಬಸವರಾಜ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

## ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ 'ವಿಶ್ವ ಪರಿಸರ ದಿನಾಚರಣೆ'



ದಾವಣಗೆರೆ, ಜೂ. 10- ನಗರದ ಸೇಂಟ್‌ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 'ಪರಿಸರ ಜಾಗೃತಿ ಜಾಥಾ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ದಿನದ ಅಂಗವಾಗಿ ವಿದ್ಯಾರ್ಥಿಗಳು ಕಾಡು ಬೆಳೆಸಿ, ನಾಡು ಉಳಿಸಿ, ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ, ವನ್ಯ ಸಂಕುಲವನ್ನು ಸಂರಕ್ಷಿಸಿ ಎಂಬ ಘೋಷಣೆಗಳನ್ನು ಕೂಗುತ್ತಾ, ಪರಿಸರದ ಅಳಿವು-ಉಳಿವಿನ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕ ದೇವಸ್ಥಾನದ ಬಳಿ ವಿದ್ಯಾರ್ಥಿಗಳು ಮಾನವನಿಂದ ಪರಿಸರಕ್ಕಾಗುತ್ತಿರುವ ತೊಂದರೆ ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಪರಿಸರ ಗೀತೆಯನ್ನು ಹಾಡುತ್ತಾ, ಬೀದಿ ನಾಟಕದ ಮೂಲಕ ಪರಿಸರವನ್ನು ಸಂರಕ್ಷಿಸಲು ನಾವೆಲ್ಲರೂ ಕೈ ಜೋಡಿಸೋಣ ಎಂಬ ಸಂದೇಶವನ್ನು ಸಾರಿದರು. ಒಂದರಿಂದ ಐದನೇ ತರಗತಿ ಮಕ್ಕಳು ಹದಡಿ ರಸ್ತೆಯ ವಿದ್ಯಾನಗರದ ಬಳಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಜಾಥಾ ಹಮ್ಮಿಕೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್.ಅನಿಲ್‌ಕುಮಾರ್, ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ ಮತ್ತು ಇತರರು ಉಪಸ್ಥಿತರಿದ್ದರು.

ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಆರಿಫ್ ಆರ್. ಮತ್ತು ಪ್ರೀತಾ.ಟಿ. ರೈ, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಎಸ್.ಎಂ. ಹಾಗೂ ಇತರರು ಪಾಲ್ಗೊಂಡಿದ್ದರು.

## ಎ.ಎ.ಪಿ. ರೋಸ್ ಅವಿನ್ಯೂ ಕಚೇರಿ ತೆರವಿಗಾಗಿ ಎರಡು ತಿಂಗಳ ಗಡುವು

ನವದೆಹಲಿ, ಜೂ. 10 – ಆಮ್ ಆದ್ಮಿ ಪಾರ್ಟಿಯು ದೆಹಲಿಯ ರೋಸ್ ಅವಿನ್ಯೂದಲ್ಲಿ ಹೊಂದಿರುವ ಕಚೇರಿ ತೆರವುಗೊಳಿಸಲು ಜೂನ್ 15ರವರೆಗೆ ನೀಡಲಾಗಿದ್ದ ಗಡುವನ್ನು ಸುಪ್ರೀಂ ಕೋರ್ಟ್ ಇನ್ನೂ ಎರಡು ತಿಂಗಳು ವಿಸ್ತರಿಸಿದೆ.

ದೆಹಲಿ ಹೈಕೋರ್ಟ್‌ಗೆ ನೀಡಲಾಗಿದ್ದ ಜಾಗದಲ್ಲಿ ಆಮ್ ಆದ್ಮಿ ಪಾರ್ಟಿ ತನ್ನ ಕಚೇರಿ ಹೊಂದಿದೆ.

ಇದನ್ನು ಜೂನ್ 15ರ ಒಳಗೆ ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಕಳೆದ ಮಾರ್ಚ್ 4ರಂದು ನಿರ್ದೇಶನ ನೀಡಿತ್ತು.

ಆಮ್ ಆದ್ಮಿ ಪಾರ್ಟಿ ಪರವಾಗಿ ಸುಪ್ರೀಂ ಕೋರ್ಟ್ ಎದುರು ಹಾಜರಾದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಗಡುವು ವಿಸ್ತರಣೆಯ ಕೊನೆಯ ಅವಕಾಶ ನೀಡಬೇಕು ಎಂದು ಕೋರಿದ್ದರು.

## ಲಾರಿ ದರೋಡೆ: ಇಬ್ಬರು ಅಪ್ರಾಪ್ತರು ಸೇರಿ ಐವರ ಬಂಧನ

ದಾವಣಗೆರೆ, ಜೂ.10- ನಗರದ ಹೊರ ವಲಯದ ಎಚ್.ಕಲ್ಪನಹಳ್ಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ ಚಾಲಕ ಊಟಕ್ಕೆಂದು ಲಾರಿ ನಿಲ್ಲಿಸಿದ್ದ ವೇಳೆ ದರೋಡೆ ಮಾಡಿದ್ದ ಪ್ರಕರಣದಲ್ಲಿ ಇಬ್ಬರು ಅಪ್ರಾಪ್ತರು ಸೇರಿ ಐವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಸೂಡಂಬಿ ಗ್ರಾಮದ ಲಾರಿ ಚಾಲಕ ಸಂದೀಪ ಶಿವನಗೌಡ ಹಿರೇಗೌಡ ಮೊನ್ನೆ ದಿನಾಂಕ 7ರಂದು ರಾತ್ರಿ ಲಾರಿಗೆ ಬಾಡಿ ಕಟ್ಟಿಸಲೆಂದು ತುಮಕೂರಿಗೆ ಹೋಗಿದ್ದರು. ಲಾರಿಯನ್ನು ತೆಗೆದುಕೊಂಡು ಪೂನಾ- ಬೆಂಗಳೂರು ರಸ್ತೆ ಮಾರ್ಗವಾಗಿ ಸಾಗುವಾಗ ದಾವಣಗೆರೆ ತಾಲೂಕಿನ ಎಚ್.ಕಲ್ಪನಹಳ್ಳಿ ಬಳಿ ರಾತ್ರಿ ಊಟಕ್ಕೆಂದು ಲಾರಿ ನಿಲ್ಲಿಸಿಕೊಂಡು ನಿಂತಿದ್ದರು. ಈ ವೇಳೆ ಆಟೋ ರಿಕ್ಷಾದಲ್ಲಿ ಬಂದ ಕಿಡಿಗೇಡಿಗಳು ಲಾರಿಯನ್ನು ದರೋಡೆ ಮಾಡಿದ್ದರು. ಈ ಬಗ್ಗೆ ದೂರು ನೀಡಲಾಗಿತ್ತು.

ತನಿಖೆ ನಡೆಸಿದ್ದ ಪೊಲೀಸರು, ಎಸ್‌ಜೆಎಂ ನಗರದ ಆಟೋ ಚಾಲಕ ಕುಶಾಲ್ (20), ಆಂಜನೇಯ ಮಿಲ್ ಬಳಿಯ ನಿವಾಸಿ, ಕೂಲಿ ಕೆಲಸಗಾರ ವೆಂಕಟೇಶ (19), ಕಿರಣಕುಮಾರ (19) ಹಾಗೂ ಇಬ್ಬರು ಅಪ್ರಾಪ್ತರನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ, ದೂರುದಾರ ಸಂದೀಪ್ ಶಿವನಗೌಡ ಹಿರೇಗೌಡ ಅವರಿಂದ ದರೋಡೆ ಮಾಡಿದ್ದ 1200 ನಗದು, 10 ಸಾವಿರ ಮೌಲ್ಯದ ಫೋನ್, ಕೃತ್ಯಕ್ಕೆ ಬಳಸಿದ್ದ 1.20 ಲಕ್ಷ ಮೌಲ್ಯದ ಆಟೋ ರಿಕ್ಷಾವನ್ನು ಜಪ್ತಿ ಮಾಡಲಾಗಿದೆ.

ಆಟೋದಲ್ಲಿ ಬಂದ ಐವರು ದರೋಡೆಕೋರರು ನಿಂತಿದ್ದ ಲಾರಿಯನ್ನು ಹತ್ತಿ, ಚಾಲಕನಿಂದ ಹಣ, ಮೊಬೈಲ್ ದರೋಡೆ ಮಾಡುತ್ತಿದ್ದರು. ಈ ವೇಳೆ ಪ್ರತ್ಯಕ್ಷದರ್ಶಿಯೊಬ್ಬರು ತಕ್ಷಣ 112 ತುರ್ತು ಸ್ಪಂದನಾ ವಾಹನಕ್ಕೆ ಕರೆ ನೀಡಿ, ಮಾಹಿತಿ ನೀಡಿದ್ದರು. ಹೆದ್ದಾರಿ ಗಸ್ತು ಕರ್ತವ್ಯದಲ್ಲಿದ್ದ 112 ತುರ್ತು ಸ್ಪಂದನ ವಾಹನ ಸಿಬ್ಬಂದಿ ಸಕಾಲಕ್ಕೆ ಸ್ಥಳಕ್ಕೆ ದಾವಿಸಿದ್ದಾರೆ. ಕಿಡಿಗೇಡಿಗಳು ತಪ್ಪಿಸಿಕೊಂಡು ಓಡಿ ಹೋದಾಗ ಪೊಲೀಸ್ ಸಿಬ್ಬಂದಿ ಬೆನ್ನುಹತ್ತಿ, ಇಬ್ಬರನ್ನು ಹಿಡಿದು, ದರೋಡೆಗೆ ಒಳಗಾದ ಲಾರಿ ಚಾಲಕನನ್ನು ರಕ್ಷಣೆ ಮಾಡಿದ್ದಾರೆ. ಉಳಿದವರನ್ನು ಅನಂತರ ವಶಕ್ಕೆ ಪಡೆಯಲಾಯಿತು.

ಗ್ರಾಮಾಂತರ ಇನ್‌ಸ್ಪೆಕ್ಟರ್ ಇ. ವೈ.ಕಿರಣಕುಮಾರ, ಪಿಎಸ್‌ಐ ಜ್ಯೋವಿತ್ ರಾಜ್ ಮತ್ತು 112 ಸಿಬ್ಬಂದಿ ಸಿದ್ದೇಶ, ಚಾಲಕ ವಿನೋದ, ಠಾಣೆ ಸಿಬ್ಬಂದಿ ದೇವೇಂದ್ರ ನಾಯ್ಕ, ನಾಗಭೂಷಣ, ಅಣ್ಣಯ್ಯ, ಮಹಮ್ಮದ್ ಯೂಸೂಫ್ ಅತ್ತಾರ್, ಪಿ.ಎಂ. ವೀರೇಶ್ ಕಾರ್ಯಾಚರಣೆ ತಂಡದಲ್ಲಿದ್ದರು.

# ಮತಗಳಿಗಷ್ಟೇ ಲಿಂಗಾಯತರು, ಅಧಿಕಾರಕ್ಕೆ ಅಲ್ಲ ; ಬಿಜೆಪಿ ನಿಜವಾದ ಮುಖವಾಡ ಬಯಲು

### ಮಾಜಿ ಸಚಿವ ಹೆಚ್. ಆಂಜನೇಯ ಆರೋಪ

ಚಿತ್ರದುರ್ಗ, ಜೂ. 10- ಲಿಂಗಾಯತರು ಹಾಗೂ ಅಹಿಂದ ಸಮುದಾಯದ ಜನರು ಮತ ಹಾಕಲು ಅಷ್ಟೇ ಸೀಮಿತ, ಅಧಿಕಾರಕ್ಕೆ ಅಲ್ಲ ಎಂಬ ಬಿಜೆಪಿಯ ಮನಸ್ಥಿತಿ ಕೇಂದ್ರ ಸಚಿವ ಸಂಪುಟ ರಚನೆ ವೇಳೆ ಬಹಿರಂಗಗೊಂಡಿದೆ ಎಂದು ಮಾಜಿ ಸಚಿವ, ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ದೂರಿದ್ದಾರೆ.

ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಬಿಜೆಪಿ ಉಸಿರಾಡುತ್ತಿರುವುದೇ ವೀರಶೈವ ಲಿಂಗಾಯತ ಸಮುದಾಯದ ಮತಗಳ ಮೇಲೆ. ಆದರೆ ಈ ಸಮುದಾಯದ ಸಂಸದರಿಗೆ ಕ್ಯಾಬಿನೆಟ್ ದರ್ಜೆಯ ಖಾತೆ ನೀಡದೇ, ಕವಡೆ ಕಾಸು ಕಿಮ್ಮತ್ತು ಇಲ್ಲದ ರಾಜ್ಯ ದರ್ಜೆ ಮಂತ್ರಿ ಸ್ಥಾನ ನೀಡುವ ಮೂಲಕ ಇಡೀ ಲಿಂಗಾಯತ ವರ್ಗವನ್ನೇ ಅವಮಾನಕರವಾಗಿ ನಡೆಸಿಕೊಂಡಿದೆ. ಈ ಹಿಂದೆಯೂ ಬಿ.ಎಸ್.ಯಡಿಯೂರಪ್ಪ ನೆರಳಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಅವರನ್ನು ಅತ್ಯಂತ ಕೆಟ್ಟದಾಗಿ ನಡೆಸಿಕೊಂಡಿದ್ದ ಬಿಜೆಪಿ, ಈಗ ಅದಕ್ಕಿಂತೂ ಹೆಚ್ಚು ಅಪಮಾನ ಮಾಡುವ ರೀತಿ ಕೇಂದ್ರ ಸಚಿವ ಸಂಪುಟ ರಚನೆ ವೇಳೆ ನಡೆದುಕೊಂಡಿದೆ ಎಂದು ಬೇಸರಿಸಿದ್ದಾರೆ.

ಜೊತೆಗೆ ಎಸ್ಸಿ, ಎಸ್ಟಿ, ಹಿಂದುಳಿದ ವರ್ಗಕ್ಕೆ ಚುನಾವಣೆ ಸಂದರ್ಭದಲ್ಲಿ ಅಧಿಕಾರದ ಆಸೆ ತೋರಿಸಿ, ಮತ ಪಡೆದು ಅಧಿಕಾರದ ಗದ್ದುಗೆ ಏರಿದ ಬಳಿಕ ಅತ್ಯಂತ ನಿಕೃಷ್ಟವಾಗಿ ಈ ಸಮುದಾಯಗಳನ್ನು ಬಿಜೆಪಿ ನಡೆಸಿಕೊಳ್ಳುತ್ತದೆ ಎಂಬುದಕ್ಕೆ ಈಗಿನ ಕೇಂದ್ರ ಸಚಿವ ಸಂಪುಟದಲ್ಲಿ ಆಗಿರುವ ಅನ್ಯಾಯವೇ ಸ್ಪಷ್ಟ ಉದಾಹರಣೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಮಾದಿಗ, ಭೋವಿ, ನಾಯಕ ಹಾಗೂ ಒಬಿಸಿ ವರ್ಗದ ಅನೇಕರು ಎನ್.ಡಿ.ಎ ಒಕ್ಕೂಟದಡಿ ಗೆದ್ದಿದ್ದಾರೆ. ಆದರೆ, ಇವರ್‍ಯಾರಿಗೂ ಮಂತ್ರಿ ಸ್ಥಾನ ನೀಡದೇ, ನೀವುಗಳು ನಮ್ಮ ಕಾಲಾಳುಗಳು. ಮತ ಹಾಕಲಷ್ಟೇ ನೀವು ನಮಗೆ ಬೇಕು, ಅಧಿಕಾರ ಬಂದ ಬಳಿಕ ನೀವು ಬೇಕಿಲ್ಲ ಎಂಬುದನ್ನು ಬಿಜೆಪಿ ಸ್ಪಷ್ಟವಾಗಿ ತನ್ನ ವರ್ತನೆ ಮೂಲಕ ತೋರ್ಪಡಿಸಿದೆ ಎಂದು ದೂರಿದ್ದಾರೆ.

ಇನ್ನೂ ರಾಜ್ಯದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿರುವ ಕುರುಬ ಸಮುದಾಯಕ್ಕೆ ಒಂದು ಟಿಕೆಟ್ ನೀಡಲಿಲ್ಲ. ಇದನ್ನು ಪ್ರಶ್ನಿಸಿದ ಪಕ್ಷದ ಕಟ್ಟಾಳು ಕೆ.ಎಸ್.ಈಶ್ವರಪ್ಪ ಅವರನ್ನೇ ಉಚ್ಚಾಟಿಸಿ, ಹಿಂದುಳಿದ ಹಿರಿಯಣ್ಣನ ಸ್ಥಾನದಲ್ಲಿರುವ ಕುರುಬ ಸಮುದಾಯಕ್ಕೆ ಅಪಮಾನ ಮಾಡಿದೆ. ಜೊತೆಗೆ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ರಾಜಕಾರಣ ಮಾಡುವ ವ್ಯಕ್ತಿಗಳಿಗೆ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಈ ಮೂಲಕ ತಾನು ಲಿಂಗಾಯತ ವರ್ಗದ ವಿರೋಧಿ ಎಂಬುದನ್ನು ಸಚಿವ ಸಂಪುಟ ರಚನೆ ವೇಳೆ ಸ್ಪಷ್ಟವಾಗಿ ಬಿಜೆಪಿ ಹೇಳಿದೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ವೀರಶೈವ ಲಿಂಗಾಯತ ಹಾಗೂ ಅಹಿಂದ ವರ್ಗ ಈಗಲೇ ಸಿಡಿದೇಳಬೇಕು. ತಕ್ಷಣ ನಮ್ಮ ರಾಜಕೀಯ ಹಕ್ಕು ಆಗಿರುವ ಕ್ಯಾಬಿನೆಟ್ ದರ್ಜೆಯ ಖಾತೆ ನೀಡುವಂತೆ ಒತ್ತಡ ತರಬೇಕು. ಇಲ್ಲದಿದ್ದರೆ ಜಿಲ್ಲಾ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಸೇರಿ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಪಕ್ಷವನ್ನು ಧೂಳಿಪಟ



ಮಾಡಲು ಸಂಕಲ್ಪ ಮಾಡಬೇಕು. ನಮ್ಮನ್ನು ಮತ ಬ್ಯಾಂಕ್ ಮಾಡಿಕೊಂಡು, ಅಧಿಕಾರದ ಬಾಗಿಲಿನಿಂದ ತಬ್ಬುವ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು. ಈ ವಿಷಯದಲ್ಲಿ ಮುಖ್ಯವಾಗಿ ವೀರಶೈವ ಲಿಂಗಾಯತ ಸಮುದಾಯ ಜನಜಾಗೃತಿಗೆ ಮುಂದಾಗಬೇಕು. ಈ ಹೋರಾಟಕ್ಕೆ ಅಹಿಂದ ವರ್ಗ ಬೆಂಬಲವಾಗಿ ನಿಲ್ಲಬೇಕು. ಈ ಮೂಲಕ ಮತದಾನವಷ್ಟೇ ಅಲ್ಲ; ಅಧಿಕಾರವೂ ನಮ್ಮ ಹಕ್ಕು ಎಂಬುದನ್ನು ಮಂಡಿಸಬೇಕು ಎಂದು ಕೋರಿದ್ದಾರೆ.

**ಭದ್ರಾ ಮೇಲ್ದಂಡೆ ಅಭಿವೃದ್ಧಿಗೆ ಅಸಹಕಾರ, ಘೇರಾವ್ ಎಚ್ಚರಿಕೆ:** ಕರುನಾಡು ವತಿಯಿಂದ ರಾಜ್ಯಸಭೆ ಪ್ರತಿನಿಧಿಸುವ ನಿರ್ಮಲ ಸೀತಾರಾಮನ್, ರಾಜ್ಯದ ಅಭಿವೃದ್ಧಿ ಹಾಗೂ ಮಧ್ಯಕರ್ನಾಟಕಕ್ಕೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ಅಸಹಕಾರ ತೋರಿಸುವ ಮೂಲಕ ತೀವ್ರ ಅನ್ಯಾಯ ಮಾಡಿದ್ದು, ಈಗಲೂ ತಮ್ಮ ನಡೆ ಮುಂದುವರೆಸಿದರೇ, ಅವರ ರಾಜ್ಯ ಪ್ರವೇಶದ ವೇಳೆ ಘೇರಾವ್ ಹಾಕಲಾಗುವುದು ಎಂದು ಆಂಜನೇಯ ಎಚ್ಚರಿಸಿದ್ದಾರೆ.

ಕಳೆದ ಅಧಿಕಾರದ ಅವಧಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗಲೂ, ಬಳಿಕ ಕಾಂಗ್ರೆಸ್ ಸರ್ಕಾರದಲ್ಲಂತೂ ನಮ್ಮ ಪಾಲಿನ ತೆರಿಗೆ ನೀಡದೆ ವಂಚಿಸಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತಂದಿದ್ದರು. ಜೊತೆಗೆ ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ್ದ 5300 ಕೋಟಿ ಹಣದಲ್ಲಿ ಒಂದು ರೂಪಾಯಿ ಬಿಡುಗಡೆ ಮಾಡದೇ ಅನ್ಯಾಯ ಮಾಡಲಾಯಿತು.

ಬಿಜೆಪಿಯ 25 ಸಂಸದರು ಖಂಡಿಸದೇ ಮೌನವಹಿಸಿ, ತಮ್ಮನ್ನು ಗೆಲ್ಲಿಸಿದ ಕನ್ನಡಿಗರಿಗೆ ಅನ್ಯಾಯ ಮಾಡಿದ್ದರು. ಈಗಲೂ ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿದರೆ, ಘೇರಾವ್ ಹಾಕಲಾಗುವುದು ಎಂದು ಎಚ್ಚರಿಸಿದ್ದಾರೆ.

**ಕನ್ನಡಿಗರಿಗೆ ಪ್ರಧಾನಿ ಹುದ್ದೆ ನೀಡಿದ್ದು ಕಾಂಗ್ರೆಸ್:** ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರ ನಡೆಸಿದ ಸಂದರ್ಭದಲ್ಲಿ ರಾಜ್ಯದ ಸಂಸದರಿಗೆ ಉತ್ತಮ ಖಾತೆ ನೀಡಿ ಕರುನಾಡನ್ನು ಗೌರವಿಸಿತ್ತು. ಆದರೆ, ಬಿಜೆಪಿ ಸರ್ಕಾರ ಸಂಪೂರ್ಣ ನಿರ್ಲಕ್ಷಿಸಿದೆ ಎಂದು ಆಂಜನೇಯ ದೂರಿದ್ದಾರೆ.

ಸಿ.ಕೆ.ಜಾಫರ್ ಷರೀಫ್‌ಗೆ ರೈಲ್ವೆ, ಎಸ್.ಎಂ. ಕೃಷ್ಣ ಅವರಿಗೆ ವಿದೇಶಾಂಗ, ಕೆ.ಎಚ್.ಮುನಿಯಪ್ಪ ಅವರಿಗೆ ಹೆದ್ದಾರಿ ಹೀಗೆ ಅನೇಕರಿಗೆ ಪ್ರಮುಖ ಖಾತೆ ನೀಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ಸಹಕರಿಸಿತ್ತು. ಜೊತೆಗೆ ಪ್ರಧಾನಿ ಹುದ್ದೆ ಎಚ್.ಡಿ. ದೇವೇಗೌಡರು ಅಲಂಕರಿಸಲು ಬೆಂಬಲ ವ್ಯಕ್ತಪಡಿಸಿ, ಕನ್ನಡದ ವ್ಯಕ್ತಿಯೊಬ್ಬರನ್ನು ಮೊದಲ ಬಾರಿಗೆ ಪ್ರಧಾನಿಯನ್ನಾಗಿ ಮಾಡಿದ ಹೆಮ್ಮೆ ಕಾಂಗ್ರೆಸ್ ಪಕ್ಷಕ್ಕೆ ಇದೆ. ಆದರೆ, ಬಿಜೆಪಿ ರಾಜ್ಯದ ಲಿಂಗಾಯತರು ಮತ್ತು ಅಹಿಂದ ವರ್ಗವನ್ನು ಕೇವಲ ಮತಗಳಿಗೆ ಸೀಮಿತ ಮಾಡಿಕೊಂಡು ಬಣ್ಣದ ಮಾತಿನಲ್ಲಿ ವಂಚಿಸುತ್ತಿದೆ. ಈ ಕುರಿತು ಕನ್ನಡಿಗರು ಅದರಲ್ಲೂ ಲಿಂಗಾಯತ, ಅಹಿಂದ ಸಮುದಾಯ ಹೆಚ್ಚು ಎಚ್ಚರಿಕೆ ವಹಿಸಬೇಕು. ಬಿಜೆಪಿಯ ನಯವಂಚನೆ ವಿರುದ್ಧ ಸಿಡಿದೇಳಬೇಕು ಎಂದು ಆಂಜನೇಯ ತಿಳಿಸಿದ್ದಾರೆ.

# ಎಸ್ಸೆಸ್ - 94 : ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

## ಯುವಕರಿಗೆ ಶಾಮನೂರು ಶಿವಶಂಕರಪ್ಪ ಆದರ್ಶ: ದಿನೇಶ್ ಕೆ. ಶೆಟ್ಟಿ



ದಾವಣಗೆರೆ, ಜೂ. 10 - ನಗರದ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘ ಇವರ ಆಶ್ರಯದಲ್ಲಿ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ 94ನೇ ಜನ್ಮದಿನದ ಅಂಗವಾಗಿ ಎಸ್.ಎಸ್. ಕಪ್ -2024 ಕ್ರಿಕೆಟ್ ಪಂದ್ಯಾವಳಿಗೆ ಇಂದು ಚಾಲನೆ ನೀಡಲಾಯಿತು.

ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿರುವ ಈ ಪಂದ್ಯಾವಳಿಯನ್ನು ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಇಂದಿನ ಯುವಕರಿಗೆ ಶಾಮನೂರು ಶಿವಶಂಕರಪ್ಪನವರು ಆದರ್ಶವಾಗುವಂತೆ ಜೀವನ ನಡೆಸುತ್ತಿದ್ದು ಅವರ ಜೀವನ ಲಕ್ಷಾಂತರ ಜನರಿಗೆ ಆದರ್ಶವಾಗಿದೆ ಎಂದು ತಿಳಿಸಿದರು.

ಶಾಮನೂರು ಶಿವಶಂಕರಪ್ಪ ಅವರು ಇದೇ ದಿನಾಂಕ 16ಕ್ಕೆ 93 ವರ್ಷ ಪೂರೈಸಿ 94ನೇ ವಸಂತಕ್ಕೆ ಪಾದಾರ್ಪಣೆ ಮಾಡಲಿದ್ದು ಈ ಹಿನ್ನೆಲೆಯಲ್ಲಿ ಈ ಪಂದ್ಯಾವಳಿ ಹಮ್ಮಿಕೊಂಡಿರುವುದು ಶ್ಲಾಘನೀಯವೆಂದರು.

ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಕ್ರೀಡಾಪಟುಗಳ ಸಂಘದ ಉಪಾಧ್ಯಕ್ಷ ಶಿವಗಂಗಾ ಶ್ರೀನಿವಾಸ್, ಸರ್ಕಲ್ ಇನ್‌ಸ್ಪೆಕ್ಟರ್ ಕಿರಣ್ ಕುಮಾರ್, ಜಯಪ್ರಕಾಶ್ ಗೌಡ, ಕುರುಡಿ ಗಿರೀಶ್, ಶ್ರೀನಾಥ್ , ಸುರೇಶ್, ಯತೀಶ್ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ನಾಯ್ಡು 'ಸೂಪರ್ ಸಿಕ್ಸ್'ಗೆ ಖಾಲಿ ಬೊಕ್ಕಸದ ಸಮಸ್ಯೆ

## ಶಾಲಾ ಮಕ್ಕಳಿಂದ ರೈತರವರೆಗೆ ಕೊಡುಗೆ ನೀಡಲು ಹೊಂದಿಸಬೇಕಿದೆ ಹಣ

ಅಮರಾವತಿ, ಜೂ. 10 – ಟಿ.ಡಿ.ಪಿ. ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರು 'ಸೂಪರ್ ಸಿಕ್ಸ್' ಎಂಬ ಜನಪ್ರಿಯ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದಿದ್ದಾರೆ. ಈ ಭರವಸೆಗಳನ್ನು ಈಡೇರಿಸಲು ಖಾಲಿ ಆಗಿರುವ ಬೊಕ್ಕಸ ದೊಡ್ಡ ಸಮಸ್ಯೆಯಾಗಿದೆ.

ಜೂನ್ 12ರಂದು ನಾಯ್ಡು ಆಂಧ್ರದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ನಾಯ್ಡು ಚುನಾವಣೆಯಲ್ಲಿ ನೀಡಿರುವ ಭರವಸೆಯ ಪ್ರಕಾರ, ಜುಲೈ 1ರಿಂದ 65 ಲಕ್ಷ ಫಲಾನುಭವಿಗಳಿಗೆ 4,500 ಕೋಟಿ ರೂ.ಗಳ ಸಾಮಾಜಿಕ ಪಿಂಚಣಿ ವಿತರಿಸಬೇಕಿದೆ.

'ಸೂಪರ್ ಸಿಕ್ಸ್' ಎಂಬ ಆರು ಭರವಸೆಗಳನ್ನು ಚುನಾವಣಾ ಸಂದರ್ಭದಲ್ಲಿ ಪ್ರಮುಖವಾಗಿ ಬಿಂಬಿಸಲಾಗಿತ್ತು. ಇದರ ಪ್ರಕಾರ ಮಾಸಿಕ ಪಿಂಚಣಿಯನ್ನು ಈಗಿರುವ 3ರಿಂದ 4 ಸಾವಿರ ರೂ.ಗಳಿಗೆ ಹೆಚ್ಚಿಸಲಾಗುವುದು. ಏಪ್ರಿಲ್ ತಿಂಗಳಿನಿಂದ ಪೂರ್ವಾನ್ವಯವಾಗುವ ರೀತಿಯಲ್ಲಿ ಈ ಹೆಚ್ಚಳ ಜಾರಿಗೆ ತರಲಾಗುವುದು.

ಈ ಯೋಜನೆಯ ಕಾರಣದಿಂದ ಜುಲೈ ತಿಂಗಳಿಗೆ ಸರ್ಕಾರಕ್ಕೆ 4,500 ಕೋಟಿ ರೂ.ಗಳ ಅಗತ್ಯವಿದೆ. ಇದರ ಜೊತೆಗೆ ಉದ್ಯೋಗಿಗಳ ವೇತನ ಹಾಗೂ ಪಿಂಚಣಿಗೆ 6 ಸಾವಿರ ಕೋಟಿ ರೂಗಳ ಅಗತ್ಯವಿದೆ.

ಜುಲೈ ತಿಂಗಳಿಗೆ ನೂತನ ಟಿ.ಡಿ.ಪಿ. ಸರ್ಕಾರ 10 ಸಾವಿರ ಕೋಟಿ ರೂ.ಗಳನ್ನು ಹೊಂದಿಸುವ ಅಗತ್ಯವಿದೆ ಎಂದು ನಿವೃತ್ತ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವೇತನ, ಪಿಂಚಣಿ, ಸಾಲ ಮರುಪಾವತಿ ಹಾಗೂ ಬಡ್ಡಿಗಾಗಿಯೇ ರಾಜ್ಯ ಸರ್ಕಾರ ಪ್ರತಿ ವರ್ಷ 1.30 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದವರು ಹೇಳಿದ್ದಾರೆ.

ನಾಯ್ಡು ಜಾರಿಗೆ ತರಲು ಉದ್ದೇಶಿಸಿರುವ ಸೂಪರ್ ಸಿಕ್ಸ್ ಯೋಜನೆಗೆ ವರ್ಷಕ್ಕೆ 1.21 ಲಕ್ಷ ಕೋಟಿ ರೂ.ಗಳ ಅಗತ್ಯವಾಗಲಿದೆ ಎಂದು ನಿರ್ಗಮಿಸಲಿರುವ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಹೇಳಿದ್ದರು.

ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, ಆಂಧ್ರ ಸರ್ಕಾರ ಜೂನ್ 11ರಿಂದ ಹರಾಜಿನ ಮೂಲಕ 2 ಸಾವಿರ ಕೋಟಿ ರೂ.ಗಳ ಸೆಕ್ಯೂರಿಟಿಗಳನ್ನು ಮಾರಲಿದೆ. ಸಾಮಾಜಿಕ ಪಿಂಚಣಿ ಯೋಜನೆ ಒಂದಕ್ಕೇ ರಾಜ್ಯ ಸರ್ಕಾರಕ್ಕೆ ಪ್ರತಿ ತಿಂಗಳು 2,600 ಕೋಟಿ ರೂ.ಗಳ ಅಗತ್ಯವಿದೆ.

ಇದೇ ರೀತಿ, ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗುವುದು ಎಂದು ನಾಯ್ಡು ಅವರ ತೆಲುಗು ದೇಶಂ ಪಕ್ಷ ಭರವಸೆ ನೀಡಿತ್ತು. ಸಾರಿಗೆ ನಿಗಮ ಪ್ರತಿ ತಿಂಗಳು 500 ಕೋಟಿ ರೂ.ಗಳವರೆಗಿನ ಆದಾಯ ಗಳಿಸುತ್ತಿದೆ. ನಿಗಮದಲ್ಲಿ ಶೇ.35ರಿಂದ 40ರಷ್ಟು ಮಹಿಳೆಯರು ಪ್ರಯಾಣಿಸುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ.

ತೆಲಂಗಾಣ ಸಾರಿಗೆ ನಿಗಮ ಸಹ ಇದೇ ರೀತಿಯ ಯೋಜನೆ ಜಾರಿಗೆ ತಂದಿತ್ತು. ಆಗ ಒಟ್ಟು ಪ್ರಯಾಣಿಕರಲ್ಲಿ ಮಹಿಳೆಯರ ಪ್ರಮಾಣ ಶೇ.50ಕ್ಕೆ ತಲುಪಿತ್ತು.

ಉಚಿತ ಸಾರಿಗೆ ಯೋಜನೆಯಿಂದ ಸರ್ಕಾರ ಪ್ರತಿ ವರ್ಷ ಆಂಧ್ರ ಸಾರಿಗೆ ನಿಗಮಕ್ಕೆ 2 ಸಾವಿರ ಕೋಟಿ ರೂ. ಪಾವತಿಸುವ ಅಗತ್ಯ ಬರಲಿದೆ ಎಂದು ಅಂದಾಜಿಸಲಾಗಿದೆ.

ಅಲ್ಲದೇ, ಶಾಲೆಗೆ ಹೋಗುವ ಪ್ರತಿ ಮಗುವಿಗೆ ವರ್ಷಕ್ಕೆ 15 ಸಾವಿರ ರೂ. ನೀಡುವುದಾಗಿ ಟಿ.ಡಿ.ಪಿ. ಭರವಸೆ ನೀಡಿದೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡ ವೈ.ಆರ್.ಎಸ್. ಕಾಂಗ್ರೆಸ್ ಪಕ್ಷ ಸರ್ಕಾರವು ಇದೇ ರೀತಿಯ 'ಅಮ್ಮ ವೊಡಿ' ಎಂಬ ಹೆಸರಿನ ಯೋಜನೆಗೆ 6,500 ಕೋಟಿ ರೂ.ಗಳನ್ನು ಕಾಯ್ದಿರಿಸಿತ್ತು.

ಈ ಯೋಜನೆಯ ಗರಿಷ್ಠ ಫಲಾನುಭವಿ ಮಿತಿಯನ್ನು ನಾಯ್ಡು ತೆಗೆದು ಹಾಕಿದ್ದಾರೆ. ಇದರಿಂದಾಗಿ ಒಟ್ಟಾರೆ ವೆಚ್ಚ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಪ್ರತಿ ಮನೆಗೆ ವರ್ಷಕ್ಕೆ ಮೂರು ಉಚಿತ ಅಡುಗೆ ಅನಿಲದ ಸಿಲಿಂಡರ್ ಹಾಗೂ ಪ್ರತಿ ರೈತನಿಗೆ ವರ್ಷಕ್ಕೆ 20 ಸಾವಿರ ರೂ.ಗಳ ಹಣಕಾಸು ನೆರವು ನೀಡುವುದಾಗಿಯೂ ನಾಯ್ಡು ಭರವಸೆ ನೀಡಿದ್ದರು.

2023-24ರಲ್ಲಿ ರಾಜ್ಯ ಸರ್ಕಾರದ ಸಾಲದ ಪ್ರಮಾಣ 4.83 ಲಕ್ಷ ಕೋಟಿ ರೂಗಳಿಗೆ ತಲುಪಿದೆ. ಇದರ ಜೊತೆಗೆ 1.39 ಲಕ್ಷ ಕೋಟಿ ರೂ.ಗಳ ಸರ್ಕಾರಿ ಗ್ಯಾರಂಟಿ ಹಾಗೂ ಕೇಂದ್ರದಿಂದ ಪಡೆದ 26,296 ಕೋಟಿ ರೂ.ಗಳ ಸಾಲದ ಹೊರೆಯೂ ಇದೆ.

2024-25ರ ಲೇಖಾನುದಾನದ ಪ್ರಕಾರ ರಾಜ್ಯದ ಒಟ್ಟು ಆದಾಯ 2,05,352.19 ಕೋಟಿ ರೂ. ಇರುವ ಅಂದಾಜಿದೆ. ವೆಚ್ಚದ ಪ್ರಮಾಣ 2,30,110.41 ಕೋಟಿ ರೂ. ಆಗಿದೆ.

## ಮಣಿಪುರದಲ್ಲಿ ಉಗ್ರರ ದಾಳಿ

ಇಂಫಾಲ್, ಜೂ. 10 – ಮಣಿಪುರದ ಮುಖ್ಯಮಂತ್ರಿ ಎನ್. ಬೀರೇನ್ ಸಿಂಗ್ ಅವರ ಬೆಂಗಾವಲು ವಾಹನಗಳ ಮೇಲೆ ಶಂಕಿತ ಉಗ್ರರು ದಾಳಿ ನಡೆಸಿದ್ದಾರೆ. ದಾಳಿಯಲ್ಲಿ ಭದ್ರತಾ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ.

ಬೆಂಗಾವಲು ವಾಹನಗಳು ಹಿಂಸಾ ಪೀಡಿತ ಜಿರಿಬಮ್‌ಗೆ ತೆರಳುವಾಗ ಕಂಗ್ಪೊಕ್ಪಿ ಜಿಲ್ಲೆಯಲ್ಲಿ ದಾಳಿ ನಡೆಸಲಾಗಿದೆ. ಭದ್ರತಾ ವಾಹನಗಳ ಮೇಲೆ ಗುಂಡು ಹಾರಿಸಲಾಗಿದೆ. ಭದ್ರತಾ ಸಿಬ್ಬಂದಿ ಸಹ ಪ್ರತಿದಾಳಿ ನಡೆಸಿದ್ದಾರೆ. ಬೆಂಗಾವಲು ವಾಹನದಲ್ಲಿದ್ದ ಚಾಲಕರೊಬ್ಬರಿಗೆ ಗುಂಡಿನ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

## ಕುಮಾರಸ್ವಾಮಿಗೆ ಉಕ್ಕು, ಜೋಷಿಗೆ ಆಹಾರ ಸಚಿವಾಲಯ



ನವದೆಹಲಿ, ಜೂ. 10 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಂಪುಟಕ್ಕೆ ರಾಜ್ಯದಿಂದ ಸೇರ್ಪಡೆಯಾಗಿರುವ ನಿರ್ಮಲಾ ಸೀತಾರಾಮನ್ ಅವರಿಗೆ ಈ ಹಿಂದಿನಂತೆಯೇ ಹಣಕಾಸು ಸಚಿವಾಲಯ ದೊರೆತಿದೆ.

ಕೃಷಿ ಸಚಿವಾಲಯ ಬಯಸಿದ್ದ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವಾಲಯ ನೀಡಲಾಗಿದೆ. ಕಳೆದ ಬಾರಿ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ಪ್ರಹ್ಲಾದ್ ಜೋಷಿ ಅವರಿಗೆ ಈ ಬಾರಿ ಆಹಾರ ಮತ್ತು ನಾಗರಿಕ ಪೂರೈಕೆ, ಇಂಧನ ಸಚಿವಾಲಯಗಳ ಜವಾಬ್ದಾರಿ ದೊರೆತಿದೆ. ರಾಜ್ಯ ಖಾತೆ ಸಚಿವೆಯಾಗಿರುವ ಶೋಭಾ ಕರಂದ್ಲಾಜೆ ಅವರಿಗೆ ಸಣ್ಣ ಹಾಗೂ ಮಧ್ಯಮ ಕೈಗಾರಿಕೆ ಮತ್ತು ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರಿಗೆ ಜಲಶಕ್ತಿ ಹಾಗೂ ರೈಲ್ವೆ ಸಚಿವಾಲಯ ದೊರೆತಿವೆ.

# 21ಕ್ಕೆ ನಗರದಲ್ಲಿ ಅಂತರರಾಷ್ಟ್ರೀಯ ಯೋಗ ದಿನ

ದಾವಣಗೆರೆ, ಜೂ.10- ಇದೇ ದಿನಾಂಕ 21ರಂದು ಜಿಲ್ಲಾ ಮಟ್ಟದಲ್ಲಿ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಗರದಲ್ಲಿ ಆಯೋಜಿಸಲಾಗಿದ್ದು, ಜಿಲ್ಲೆಯ ಎಲ್ಲಾ ಯೋಗಾಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಯುಷ್ ಅಧಿಕಾರಿ ಯೋಗೇಂದ್ರ ಕುಮಾರ್ ತಿಳಿಸಿದರು.




ನಗರದ ಸರ್ಕಾರಿ ಪ್ರಕೃತಿ ಚಿಕಿತ್ಸೆ ಆಸ್ಪತ್ರೆಯಲ್ಲಿ ಸೋಮವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಚರ್ಚಿಸಿದ ಅವರು, ಜಿಲ್ಲಾಡಳಿತ, ಜಿಲ್ಲಾ ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಗುವುದು ಎಂದು ತಿಳಿಸಿದರು.

'ಮಹಿಳಾ ಸಬಲೀಕರಣಕ್ಕಾಗಿ ಯೋಗ' ಎಂಬ ಘೋಷ ವಾಕ್ಯದೊಂದಿಗೆ ಈ ಬಾರಿ ಯೋಗ ದಿನ ಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲಿನ ಸ್ವಯಂ ಸೇವಕರು, ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 4ರಿಂದ 5 ಸಾವಿರ ಜನರು ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಯೋಗ ಒಕ್ಕೂಟದ ಜಿಲ್ಲಾಧ್ಯಕ್ಷ ವಾಸುದೇವ ರಾಯ್ಕರ್ ಮಾತನಾಡಿ, ಯೋಗ ಕೇವಲ ದೈಹಿಕ ವ್ಯಾಯಾಮವಲ್ಲ. ಮನಸ್ಸು, ದೇಹ ಮತ್ತು ಆತ್ಮವನ್ನು ಒಳಗೊಳ್ಳುವ ಅಭ್ಯಾಸ ಇದಾಗಿದೆ ಎಂದು ತಿಳಿಸಿದರು. ವಾಕಥಾನ್ ಆಯೋಜಿಸಲಾಗಿದ್ದು, ಎಲ್ಲರೂ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

### ಯೋಗೋತ್ಸವ...!

**ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಜೂ.10 ರಿಂದ 20ರ ವರೆಗೆ 'ಯೋಗೋತ್ಸವ' ಶೀರ್ಷಿಕೆಯಡಿ ವಿವಿಧ ಸಂಘಟನೆಯ ಸಹಯೋಗದಲ್ಲಿ ಯೋಗ, ರಸ ಪ್ರಶ್ನೆ, ಕ್ರೀಡೆ, ಸಮೂಹ ನೃತ್ಯ, ಆಶುಭಾಷಣ ಮತ್ತು ಬೋಧನಾ ಕೌಶಲ್ಯ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ.**

ಈ ವೇಳೆ ಸರ್ಕಾರಿ ಪ್ರಕೃತಿ ಚಿಕಿತ್ಸೆಯ ಆಡಳಿತ ವೈದ್ಯಾಧಿಕಾರಿ ಡಿ.ಎಂ. ರತ್ನಾ, ವೈದ್ಯಾಧಿಕಾರಿ ಡಾ. ಸಿದ್ದೇಶ್ ಈ ಬಿಸನಳ್ಳಿ, ಸುರೇಶ್, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಕೆಜಿಎಎಂಒಎನ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಬೂದಿಹಾಳ ಮತ್ತಿತರರಿದ್ದರು.

# ಸ್ವಕುಳಸಾಳಿ ಸಮಾಜಕ್ಕೆ ಬೇಕಿದೆ ಹೆಚ್ಚಿನ ಅನುದಾನ

ದಾವಣಗೆರೆ, ಜೂ.10- ಕಡಿಮೆ ಜನಸಂಖ್ಯೆ ಹೊಂದಿದ ಸ್ವಕುಳಸಾಳಿ ಸಮಾಜಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನ ಸಿಕ್ಕರೆ ರಾಜ್ಯದಲ್ಲಿ ಸಮುದಾಯ ಭವನ ನಿರ್ಮಿಸಲಾಗುವುದು ಎಂದು ರಾಜ್ಯ ಸ್ವಕುಳಸಾಳಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಚಂದ್ರಕಾಂತ್ ಎಸ್. ಭಂಡಾರೆ ತಿಳಿಸಿದರು.

ಸ್ವಕುಳಸಾಳಿ ಶಿಕ್ಷಣ ಸಂಸ್ಥೆಯಿಂದ ನಗರದ ಜಿಹ್ವೇಶ್ವರ ಧ್ಯಾನ ಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ 'ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ' ಹಾಗೂ 'ಸ್ವಕುಳಸಾಳಿ ಶಿಕ್ಷಣ ಸಂಸ್ಥೆಯ ವಾರ್ಷಿಕ ಸರ್ವಸಾಮಾನ್ಯ ಸಭೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರ ಬಳಿ ಸಮಾಜದ ಅಭಿವೃದ್ಧಿಗಾಗಿ ಚರ್ಚಿಸಿದಾಗ 1.8 ಕೋಟಿ ರೂ.ಗಳ ಅನುದಾನ ಕೊಟ್ಟಿದ್ದರು. ಈ ಬಾರಿಯೂ ಅನುದಾನ ಪಡೆಯುವ ನಿರೀಕ್ಷೆ ಇಟ್ಟಿದ್ದೇವೆ ಎಂದು ಹೇಳಿದರು.

### ಸಮಾಜದ ಪ್ರತಿಭಾವಂತ ಮಕ್ಕಳ ಸಾಧನೆಗೆ ಸ್ವಕುಳಸಾಳಿ ಸಮಾಜದ ರಾಜ್ಯಾಧ್ಯಕ್ಷ ಚಂದ್ರಕಾಂತ್ ಶ್ಲಾಘನೆ

ಸಮಾಜದ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡಲು ಅನೇಕರು ಸ್ವಯಂ ಪ್ರೇರಿತರಾಗಿ ನೀಡಿದ ದೇಣಿಗೆಯಿಂದ ಒಟ್ಟು 3.31 ಲಕ್ಷ ರೂ.ಗಳು ಸಂಗ್ರಹವಾಗಿದೆ ಎಂದು ಹೆಮ್ಮೆ ಪಟ್ಟರು. ರಾಜ್ಯಕ್ಕೆ 6ನೇ ಸ್ಥಾನ ಗಳಿಸಿದ ಹೊಸಪೇಟೆಯ ಪೂರ್ಣಿಮಾ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಸಮಾಜದ ಕೀರ್ತಿ ಹೆಚ್ಚಿಸಿದ್ದಾರೆ ಎಂದು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಬಂದಂತಹ ಅರ್ಜಿಗಳನ್ನು ಗಮನಿಸಿದಾಗ ಸಮಾಜದಲ್ಲಿ ಪ್ರತಿಭಾವಂತ ಮಕ್ಕಳ ಸಂಖ್ಯೆ ಹೆಚ್ಚಿದೆ ಎಂದು ತಿಳಿದಿದೆ ಎಂದ ಅವರು, ಗೌರವ ಧನವನ್ನು ಹೆಚ್ಚಿಸಬೇಕಿದೆ ಎಂದರು.

ಸಿಇಟಿ ಹಾಗೂ ನೀಟ್ ಉತ್ತೀರ್ಣರಾದ ಹಾಗೂ ಮೆಡಿಕಲ್ ಶಿಕ್ಷಣ ಪಡೆಯುವವರಿಗೂ ಪ್ರೋತ್ಸಾಹ ಧನ ನೀಡುವ ಬಗ್ಗೆ ಸಲಹೆ ಬಂದಿವೆ ತಿಳಿಸಿದರು.

ಪಾಲಿಕೆಯ ಮಹಾಪೌರ ವಿನಾಯಕ ಪೈಲ್ವಾನ್ ಮಾತನಾಡಿ, ನಾನು ಮೇಯರ್ ಆಗುವುದಕ್ಕೆ ಸ್ವಕುಳಸಾಳಿ ಸಮಾಜವೂ ಕಾರಣ ಎಂದ ಅವರು, ಸಮಾಜದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಶ್ಲಾಘಿಸಿದರು.

ಅಖಿಲ ಭಾರತ ಸ್ವಕುಳಸಾಳಿ ಸಮಾಜದ ಅಧ್ಯಕ್ಷ ರಮೇಶ್ ಚಿಲ್ಲಾಳ್ ಮಾತನಾಡಿ, ಮಹಾರಾಷ್ಟ್ರದಲ್ಲೂ ಪ್ರತಿಭಾ ಪುರಸ್ಕಾರ ನಡೆಯುತ್ತಿವೆ. ಇಂತಹ ಒಳ್ಳೆಯ ಕಾರ್ಯದಿಂದ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡಬೇಕು ಎಂದು ಆಶಿಸಿದರು.

ಸ್ವಕುಳಸಾಳಿ ಸಮಾಜದ ಸ್ಥಳೀಯ ಅಧ್ಯಕ್ಷ ಜಿ.ಪಿ. ಮೋಹನ್ ಮಾತನಾಡಿ, ಶಿಕ್ಷಣ ಸಂಸ್ಥೆ ನೋಂದಣಿಯಾಗಿ 8 ವರ್ಷಗಳಾದರೂ ಆಮೆ ಗತಿಯಲ್ಲಿ ಅಭಿವೃದ್ಧಿ ಕಾಣುತ್ತಿದೆ. ಆದ್ದರಿಂದ ಸಂಸ್ಥೆಗೆ ವಿದ್ಯಾವಂತರ ಸದಸ್ಯತ್ವ ಸಂಖ್ಯೆ ಹೆಚ್ಚಾಗಬೇಕು ಎಂದು ಹೇಳಿದರು.

ನಮ್ಮ ಸಮಾಜ ಶೈಕ್ಷಣಿಕವಾಗಿ ಬಲಿಷ್ಠವಾ ಗುತ್ತಿದೆ. ಬೆಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಗೆ ಜಾಗ ಸಿಕ್ಕಿದೆ ಅದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಹೇಳಿದ ಅವರು ಸಮಾಜವೂ ಶೈಕ್ಷಣಿಕವಾಗಿ ಬಲಿಷ್ಠವಾಗುತ್ತಿದೆ ಎಂದರು.

ಸಮಾಜದ ಕಾರ್ಯದರ್ಶಿ ಧರ್ಮರಾಜ ಏಕಬೋಟೆ ಸ್ವಾಗತಿಸಿದರು. ಜಿ.ಪಿ. ರಾಜಶೇಖರ್, ರಾಜ್ಯ ಸ್ವಕುಳಸಾಳಿ ಸಮಾಜದ ಮಾಜಿ ಅಧ್ಯಕ್ಷ ಹನುಮಂತಪ್ಪ ಕ್ಷೀರಸಾಗರ, ಮಹಿಳಾ ಘಟಕದ ಉಪಾಧ್ಯಕ್ಷರಾದ ಲಲಿತಾ ಮಾಂಜ್ರೆ ಹಾಗೂ ಸಮಾಜದ ಮುಖಂಡರು ಇದ್ದರು.

ವಾಸುದೇವ ಸಾಕ್ರೆ ಕಾರ್ಯಕ್ರಮ ನಿರೂಪಿಸಿದರು. ಗಣೇಶ ಕ್ಷೀರಸಾಗರ ವಂದನೆ ಸಲ್ಲಿಸಿದದರು.







## ಮಣಿಪುರದಲ್ಲಿ ಮತ್ತೆ ಹಿಂಸಾಚಾರ; ಅಸ್ಸಾಂಗೆ ಜನರ ವಲಸೆ

ಸಿಲ್ಚಾರ್ (ಅಸ್ಸಾಂ), ಜೂ. 10 – ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿರುವುದರಿಂದ ಸಂತ್ರಸ್ತರು ಅಸ್ಸಾಂನ ಕಚರ್ ಜಿಲ್ಲೆಗೆ ತೆರಳುತ್ತಿದ್ದಾರೆ ಎಂದು ಸ್ಥಳೀಯ ಶಾಸಕರು ತಿಳಿಸಿದ್ದಾರೆ.


ಮಣಿಪುರದಲ್ಲಿ ಪೊಲೀಸ್ ಠಾಣೆ ಹಾಗೂ ಮನೆಗಳಿಗೆ ಬೆಂಕಿ ಹಚ್ಚಲಾಗಿತ್ತು. ಜಿರಿಬಮ್ ಎಂಬಲ್ಲಿ ಉಗ್ರರು ಈ ಕೃತ್ಯ ಎಸಗಿದ ನಂತರ ಪರಿಸ್ಥಿತಿ ಉದ್ವಿಗ್ನವಾಗಿದೆ. ಕಳೆದ ವರ್ಷ ಮೇ ತಿಂಗಳ ನಂತರದಿಂದಲೂ ರಾಜ್ಯದಲ್ಲಿ ಜನಾಂಗೀಯ ಹಿಂಸಾಚಾರ ನಡೆಯುತ್ತಿದೆ.

ಸುಮಾರು 600 ಜನರು ಅಸ್ಸಾಂನ ಕಚರ್ ಜಿಲ್ಲೆಯ ಗ್ರಾಮಗಳಲ್ಲಿ ಆಶ್ರಯ ಪಡೆದಿದ್ದಾರೆ. ಸರ್ಕಾರ ಯಾವುದೇ ನಿರಾಶ್ರಿತರ ಕೇಂದ್ರ ತೆರೆದಿಲ್ಲ.

ಮಣಿಪುರದ ಜನರು ಇಲ್ಲಿ ಬಂದು ಸುರಕ್ಷಿತವಾಗಿ ಉಳಿದು ಕೊಂಡಿದ್ದಾರೆ. ಇಲ್ಲಿ ಹಿಂಸಾಚಾರ ಹರಡದಂತೆ ಸ್ಥಳೀಯ ಆಡಳಿತ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಲಖಿಪುರ ಶಾಸಕ ಕೌಶಿಕ್ ರಾಯ್ ಹೇಳಿದ್ದಾರೆ.

ಗಡಿಯಲ್ಲಿ ಪೊಲೀಸ್ ಹಾಗೂ ಇತರೆ ಭದ್ರತಾ ಸಿಬ್ಬಂದಿ ಯನ್ನು ನಿಯೋಜಿಸಲಾಗಿದೆ ಎಂದು ಕಚರ್ ಪೊಲೀಸ್ ವರಿಷ್ಠಾಧಿಕಾರಿ ನೊಮಲ್ ಮಹತೋ ತಿಳಿಸಿದ್ದಾರೆ.

### ಆರನೇ ವರ್ಷದ ಪುಣ್ಯಸ್ಮರಣೆ



ಜನನ : 08-01-1993

ಮರಣ : 11-06-2018

**ದಿ।। ಶರಣೆ ಸ್ಮಿತಾ ಬಿ. ಪಾಟೀಲ್ (ಪಾಪು)**

(ಎನ್. ಪವನ್‌ಕುಮಾರ್ ಗುಬ್ಬಿ ಹದಡಿ ಇವರ ಧರ್ಮಪತ್ನಿ)

ದೇವರು ನಿನ್ನ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ.

ನಿನ್ನ ನೆನಪು ಸದಾ ಹಚ್ಚ ಹಸಿರಾಗಿದೆ. ಸದಾ ನಿನ್ನ ಸ್ಮರಣೆಯಲ್ಲಿ ಇರುವ

ತಂದೆ-ತಾಯಿ : ಬಸವನಗೌಡ ಪಾಟೀಲ್, ಎಸ್. ಮಂಜುಳ, ಶಿಕ್ಷಕರು

ಅಕ್ಕ-ಮಾವ : ಶ್ವೇತ, ಬಸನಗೌಡ ಗೌಡ್ರು, ಶಿಕ್ಷಕರು

ಚಿ।। ಚಿನ್ಮಯಿ, ಚಿ।। ಯಶಸ್, ಚಿ।। ಚಿರಂತ್

ಹಾಗೂ ಬಂಧು-ಮಿತ್ರರು. ಮೊ. 8747937296, 9591426360

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.6.2024ರಂದು ನಿಧನರಾದ

**ಟಿ. ಎನ್. ಉಮೇಶಯ್ಯ**

ಇವರ ನಿಧನಕ್ಕೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ..

• ಜಿ.ವಿ. ರಾಮ ಪ್ರಸಾದ್ • ಜಿ.ವಿ. ರವಿ ಪ್ರಸಾದ್ • ಜಿ.ವಿ. ರಘು ಪ್ರಸಾದ್ • ಕಣವಿ ರಾಜು • ಜಿ.ಎಂ. ಶಾಂತಕುಮಾರ್ • ರುದ್ರಯ್ಯ ಹುಣಸಕಟ್ಟೆ • ಕರಿಬಸಯ್ಯ • ಸಿದ್ದಯ್ಯ • ಎಸ್. ನೀಲಕಂಠಪ್ಪ • ಎಸ್ ಮಲ್ಲಿಕಾರ್ಜುನ •ಎನ್.ನಾಗೇಂದ್ರರಾವ್ • ಎನ್. ಬಸವರಾಜ (ಬ್ಲೂ ಮೌಂಟೆನ್) • ಎಂ. ರವೀಂದ್ರ ಸಾವಂತ್ • ಆಲೂರು ವಿಜಯಕುಮಾರ್ • ಸಂತೋಷ್ ಎಸ್. ಶಾಮನೂರು • ಸಂತೋಷ್ ಬೆಳಗಾವಿ ವೀರಣ್ಣ ಆಚಾರ್ • ಎ. ಭದ್ರಪ್ಪ • ಜಿಯಾವುಲ್ಲಾ ಆಂಜನೇಯ ಬಾಪೂಜಿ • ವೆಂಕಟೇಶ್ ನಾಯ್ಕ್ • ಹನುಮಂತಪ್ಪ ಸೋನಾಲಿಕ • ಜಯ್ಯಣ್ಣ ಕವಲಹಳ್ಳಿ • ಗೋಪಿ ಓಂಕಾರ್ ಆಚಾರಿ (ವಿಕ್ಕಿ) • ಪ್ರಕಾಶ್ ಗುಡ್ಡಿ ಬೀಡಾ ಸ್ಟಾಲ್

**ಚೌಕಿಪೇಟೆ ಮತ್ತು ಮಹಾರಾಜ ಪೇಟೆ ಗೆಳಯರ ಬಳಗ**

## ರಾಷ್ಟ್ರಪತಿ ಭವನದಲ್ಲಿ 'ನಿಗೂಢ'ವಾಗಿ ಕಂಡಿದ್ದು ಮನೆ ಬೆಕ್ಕು

ನವದೆಹಲಿ, ಜೂ. 10 – ಬಿಜೆಪಿ ಸಂಸದ ದುರ್ಗ ದಾಸ್ ಉಕೆ ಅವರು ಪ್ರಮಾಣ ವಚನ ಸ್ವೀಕರಿಸಿದ ವಿಡಿಯೋ ಸೋಮವಾರದಂದು ವಿಚಿತ್ರ ಕಾರಣಕ್ಕೆ ವೈರಲ್ ಆಗಿತ್ತು. ಅವರ ಪ್ರಮಾಣ ವಚನ ಸ್ವೀಕಾರದ ವೇಳೆ ರಾಷ್ಟ್ರಪತಿ ಭವನದ ನೆರಳಿನಲ್ಲಿ ಪ್ರಾಣಿಯೊಂದು ಸಾಗಿದ್ದು ಕಂಡು ಬಂದಿದ್ದು, ಇದು ಚಿರತೆ ಆಗಿರಬಹುದು ಎಂದು ಹಲವರು ಶಂಕಿಸಿದ್ದರು.

ಆದರೆ, ಈ ಬಗ್ಗೆ ದೆಹಲಿ ಪೊಲೀಸರು ಸ್ಪಷ್ಟನೆ ನೀಡಿದ್ದು, ಇದು ಸಾಮಾನ್ಯ ಮನೆ ಬೆಕ್ಕು ಎಂದಿದ್ದಾರೆ.

ಪ್ರಮಾಣ ವಚನದ ವೇಳೆ ದಾಸ್ ರಿಜಿಸ್ಟರ್‌ನಲ್ಲಿ ಸಹಿ ಹಾಕಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಬಳಿ ತೆರಳುತ್ತಿದ್ದರು. ಆಗ ನಿಗೂಢವಾಗಿ ನಾಲ್ಕು ಕಾಲಿನ ಪ್ರಾಣಿಯೊಂದು ಹಿನ್ನೆಲೆಯಲ್ಲಿ ಕಂಡು ಬಂದಿತ್ತು. ಇದು ಯಾವ ಪ್ರಾಣಿ ಎಂದು ಸಾಕಷ್ಟು ಊಹಾಪೋಹಗಳು ಹರಡುತ್ತಿದ್ದವು. ನಂತರ ಸ್ಪಷ್ಟನೆ ನೀಡಿರುವ ದೆಹಲಿ ಪೊಲೀಸರು, ರಾಷ್ಟ್ರಪತಿ ಭವನದಲ್ಲಿ ನಾಯಿ ಹಾಗೂ ಮನೆ ಬೆಕ್ಕುಗಳು ಮಾತ್ರ ಇವೆ ಎಂದು ಹೇಳಿದರು.

ರಾಷ್ಟ್ರಪತಿ ಭವನದ ಎಸ್ಟೇಟ್‌ನಲ್ಲಿ ಚಿರತೆ ಎಂದೂ ಕಂಡು ಬಂದಿಲ್ಲ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಜೂ.10- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 12ರಿಂದ 15ರ ವರೆಗೆ ಕುರಿ, ಮೇಕೆ ಮತ್ತು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ.

ದಿನಾಂಕ 12 ಮತ್ತು 13 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ದಿನಾಂಕ 14 ಮತ್ತು 15ರಂದು ಕೋಳಿ ಸಾಕಾಣಿಕೆ ತರಬೇತಿ ಆಯೋಜಿಸಲಾಗಿದೆ.ವಿವರಕ್ಕೆ ಸಂಪರ್ಕಿಸಿ : 08192-233787.

### ಎಲೆಬೇತೂರು ಬುಡ್ನಾರಪ್ಪ ಮಂಜುನಾಥ್ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ

**ಬುಡ್ನಾರಪ್ಪ ಶ್ರೀ ಮಂಜುನಾಥ್**

ಇವರು ದಿನಾಂಕ 10.6.2024ರ ಸೋಮವಾರ ಸಂಜೆ 6.30ಕ್ಕೆ ನಿಧನರಾದರು. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಅಣ್ಣ, ಅತ್ತಿಗೆ, ಮೂವರು ಸಹೋದರಿಯರು, ಮಾವಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.6.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು

**ಬಿ. ಚಂದ್ರಪ್ಪ ಮತ್ತು ಸಹೋದರಿಯರು, ಮಾವಂದಿರು ಮತ್ತು ಮಕ್ಕಳು.**

ಮೊ : 9739 655540, 88808 40666

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas